# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮೇ 06, 2022

ಸಂಪುಟ : 48 ಸಂಚಿಕೆ : 355 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಅಮೆರಿಕ-ಆಫ್ರಿಕಾ ಹೊರತುಪಡಿಸಿ ವಿಶ್ವಾದ್ಯಂತ ಕೊರೊನಾ ಇಳಿಕೆ

ಜಿನೇವಾ, ಮೇ 4 – ಅಮೆರಿಕ ಹಾಗೂ ಆಫ್ರಿಕಾ ಹೊರತು ಪಡಿಸಿದರೆ ವಿಶ್ವದ ಉಳಿದೆಲ್ಲ ಭಾಗಗಳಲ್ಲಿ ಕೊರೊನಾ ಪ್ರಕರಣಗಳು ಇಳಿಮುಖವಾಗಿವೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.



ಕಳೆದ ವಾರ 38 ಲಕ್ಷ ಹೊಸ ಸೋಂಕಿತರು ಕಂಡು ಬಂದಿದ್ದಾರೆ ಹಾಗೂ 15 ಸಾವಿರ ಸಾವುಗಳು ಸಂಭವಿಸಿವೆ. ಅದಕ್ಕೂ ಹಿಂದಿನ ವಾರಕ್ಕೆ ಹೋಲಿಸಿದರೆ ಸೋಂಕು ಶೇ.17 ಹಾಗೂ ಸಾವು ಶೇ.3ರಷ್ಟು ಕಡಿಮೆಯಾಗಿದೆ. ಆದರೆ, ವಿಶ್ವದಾದ್ಯಂತ ಹಲವಾರು ದೇಶಗಳು ವ್ಯಾಪಕ ಟೆಸ್ಟ್ ಹಾಗೂ ನಿಗಾ ಕಡಿಮೆ ಮಾಡಿವೆ. ಹೀಗಾಗಿ ಸೋಂಕು ಮತ್ತು ಸಾವಿನ ನಿಖರತೆಯನ್ನು ಈ ಅಂಕಿ ಅಂಶಗಳು ತೋರಿಸುತ್ತಿಲ್ಲ ಎಂದು ಸಂಘಟನೆ ತಿಳಿಸಿದೆ.

ಇಷ್ಟಾದರೂ ಆಫ್ರಿಕಾದಲ್ಲಿ ಶೇ.33 ಹಾಗೂ ಅಮೆರಿಕದಲ್ಲಿ ಶೇ.13ರಷ್ಟು ಕೊರೊನಾ ಸೋಂಕಿತರು ಹೆಚ್ಚಾಗಿದ್ದರೆ.

ಓಮಿಕ್ರಾನ್‌ನ ಬಿಎ.4 ರೂಪಾಂತರಿ ಕಾರಣದಿಂದಾಗಿ ಕೊರೊನಾ ಸೋಂಕು ಹೆಚ್ಚಾಗಿದೆ ಎಂದು ದಕ್ಷಿಣ ಆಫ್ರಿಕಾದ ಅಧಿಕಾರಿಗಳು ಹೇಳಿದ್ದಾರೆ. ಈ ರೂಪಾಂತರಿ ವೇಗವಾಗಿ ಹರಡುತ್ತದೆಯಾದರೂ, ಆಸ್ಪತ್ರೆಗೆ ದಾಖಲಾಗುವ ಇಲ್ಲವೇ ಸಾವಿನ ಪ್ರಮಾಣ ಹೆಚ್ಚಿಸುತ್ತದೆ ಎಂಬುದಕ್ಕೆ ಆಧಾರಗಳಿಲ್ಲ ಎಂದು ವಿಶ್ವ ಆರೋಗ್ಯ ಸಂಘಟನೆ ಹೇಳಿದೆ. ಕೊರೊನಾ ಸೋಂಕು ಋತುಮಾನ ಬದಲಾವಣೆಯೊಂದಿಗೆ ಬರುತ್ತದೆ ಎಂದು ಈಗಲೇ ಹೇಳುವುದು ಅವಸರವಾಗುತ್ತದೆ. ಕೊರೊನಾ ನಿರ್ಬಂಧ ಗಳನ್ನು ದೇಶಗಳು ತ್ವರಿತವಾಗಿ ಸಡಿಲಿಸಬಾರದು ಎಂದು ವಿಶ್ವ ಆರೋಗ್ಯ ಸಂಘಟನೆಯ ತುರ್ತು ವಿಭಾಗದ ಮುಖ್ಯಸ್ಥ ಡಾ. ಮೈಖೆಲ್ ರಾನ್ ಹೇಳಿದ್ದಾರೆ.

# ನಗರಗಳ ಅಕ್ರಮ ಮನೆಗಳ ಸಕ್ರಮ

## 6.5 ಲಕ್ಷ ಮನೆಗಳ ಸಕ್ರಮದಿಂದ 10 ಸಾವಿರ ಕೋಟಿ ರೂ. ಆದಾಯದ ನಿರೀಕ್ಷೆ

### ದಾವಣಗೆರೆ ಸೇರಿ ಎಲ್ಲಾ ಪಾಲಿಕೆಗಳ ಹೊಸ ಬಡಾವಣೆಗಳಿಗೆ ನಗರ ವಿಕಾಸ್ ಯೋಜನೆಯಡಿ ತಲಾ ನೂರು ಕೋಟಿ ರೂ.

ಬೆಂಗಳೂರು, ಮೇ 5 - ನಗರ ಪಾಲಿಕೆಗಳೂ ಸೇರಿದಂತೆ, ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಬೆಂಗಳೂರಿಗೆ ಈ ಕ್ರಮ ಅನ್ವಯವಾಗುವುದಿಲ್ಲ. ಉಳಿದಂತೆ ಮೈಸೂರು, ತುಮಕೂರು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ ಸೇರಿದಂತೆ ಹತ್ತು ನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿರುವ ಅನಧಿಕೃತ ಆರೂವರೆ ಲಕ್ಷ ಅಕ್ರಮ ಮನೆಗಳನ್ನು ಸಕ್ರಮಗೊಳಿಸಲಾಗುವುದು ಎಂದರು.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಖಾಸಗಿ ಬಡಾವಣೆಗಳಲ್ಲಿ ನಕ್ಷೆ ಮಂಜೂರಾತಿ ಪಡೆಯದೇ, ಅಥವಾ ಸಕ್ರಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ನಿರ್ಮಾಣಗೊಂಡಿರುವ ಕಟ್ಟಡಗಳನ್ನು ಸಕ್ರಮಗೊಳಿಸಲಾಗುವುದು. ಈ ಬಡಾವಣೆಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದೆ. ಆದರೆ ಅವರು, ತೆರಿಗೆ ವ್ಯಾಪ್ತಿಯಿಂದ ದೂರ ಉಳಿದಿದ್ದಾರೆ.

ಇಂತಹ ಲಕ್ಷಾಂತರ ಮನೆಗಳನ್ನು ನಿವೇಶನದ ಅಳತೆಯ ಆಧಾರದ ಮೇಲೆ ಒಂದು ಬಾರಿಗೆ ಅನ್ವಯವಾಗುವಂತೆ ದಂಡ ವಿಧಿಸಿ, ಸಕ್ರಮಗೊಳಿಸಲಾಗುವುದು.

ಸಕ್ರಮಗೊಳಿಸಿದ ನಂತರ ಆ ಮನೆಯ ಅಳತೆಯ ಅನುಸಾರ ತೆರಿಗೆಯನ್ನು ನಿಗದಿಪಡಿಸಿ, ವಸೂಲಿ ಮಾಡಲು ಸ್ಥಳೀಯ ಪ್ರಾಧಿಕಾರಗಳಿಗೆ ಅನುಮತಿ ನೀಡಲಾಗುವುದು.

ಸರ್ಕಾರದ ಈ ನಿರ್ಧಾರದಿಂದ ಸುಮಾರು 9 ರಿಂದ 10 ಸಾವಿರ ಕೋಟಿ ರೂ.ಗಳು ರಾಜ್ಯ ಖಜಾನೆಗೆ ಬರಲಿದೆ.

ಬಂದ ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲಾಗುವುದು. ಅಲ್ಲದೆ ಪ್ರತಿ ವರ್ಷವೂ ಈ ಅಕ್ರಮ ಮನೆಗಳಿಂದ ತೆರಿಗೆ ವಸೂಲಿ ಮಾಡುವುದರಿಂದ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯು ಸುಧಾರಣೆಯಾಗಲಿದೆ.

ಕಾನೂನು ಸಚಿವ ಮಾಧುಸ್ವಾಮಿ ಅಧ್ಯಕ್ಷತೆಯ ಸಚಿವ ಸಂಪುಟದ ಉಪ ಸಮಿತಿ ಈ ಸಂಬಂಧ ನಿಯಮಾವಳಿಗಳನ್ನು ರಚಿಸಿದ್ದು, ಒಂದೆರಡು ತಿಂಗಳಲ್ಲಿ ಆದೇಶ ಹೊರಡಿಸಿ, ಅಕ್ರಮ ಮನೆಗಳನ್ನು ಸಕ್ರಮಗೊಳಿಸಲಾಗುವುದು ಎಂದವರು ಹೇಳಿದ್ದಾರೆ.

ಬೆಂಗಳೂರು ಪ್ರಕರಣದಲ್ಲಿ ಈ ವಿಷಯ ಸುಪ್ರೀಂ ಕೋರ್ಟ್ ಮೆಟ್ಟಲೇರಿದ್ದರೂ, ಅದನ್ನು ಸೌಹಾರ್ದಯುತವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಮೈಸೂರು, ದಾವಣಗೆರೆ ಸೇರಿದಂತೆ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಹೊಸ ಬಡಾವಣೆಗಳಿಗೆ ನಗರ ವಿಕಾಸ್ ಯೋಜನೆಯಡಿ ತಲಾ ನೂರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈಗಾಗಲೇ ಇದೇ ಯೋಜನೆಯಡಿ ಪ್ರತಿ ಪಾಲಿಕೆಯಲ್ಲೂ 150 ಕೋಟಿ ರೂ. ವೆಚ್ಚದಲ್ಲಿ ಮೂಲಸೌಕರ್ಯ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ,ತುಮಕೂರು,ಮಂಗಳೂರು ಸೇರಿದಂತೆ, ಆರು ಕಡೆ ಕಾಮಗಾರಿಗಳು ಭರದಿಂದ ನಡೆದಿದ್ದು ಶೇ. 80 ರಷ್ಟು ಕಾಮಗಾರಿಗಳು ಪೂರ್ಣವಾಗಿವೆ. ಉಳಿದಂತೆ ಕಟ್ಟಡ ನಿರ್ಮಾಣದಂತಹ ಕೆಲಸಗಳು ಬಾಕಿ ಇದ್ದು,ಇನ್ನೊಂದು ವರ್ಷದ ಒಳಗೆ ಅದನ್ನು ಪೂರ್ಣಗೊಳಿಸುವುದಾಗಿ ಹೇಳಿದರು.

ಕೊರೊನಾ ಕಾರಣದಿಂದ ಸ್ಮಾರ್ಟ್ ಸಿಟಿ ಕಾಮಗಾರಿಗಳಿಗೆ ಅಡಚಣೆಯಾಯಿತು. ಹೀಗಾಗಿ ನಮಗೆ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ಕಾಲಾವಕಾಶ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ವಿನಂತಿಸಿಕೊಂಡಿದ್ದೆವು ಎಂದು ಅವರು ತಿಳಿಸಿದರು.

ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಒದಗಿಸಲು 280 ಕೋಟಿ (2ನೇ ಪುಟಕ್ಕೆ)



# ದಾವಣಗೆರೆ ರಾಜಧಾನಿಯಾಗಿದ್ದರೆ ನಾಡು ಹೆಚ್ಚು ಸುಭಿಕ್ಷ

### ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿ ಚಿಂತಕ ಕೆ.ರಾಜಕುಮಾರ್ ಅಭಿಮತ

ದಾವಣಗೆರೆ, ಮೇ 5- ದಾವಣಗೆರೆ ರಾಜ್ಯದ ರಾಜಧಾನಿಯಾಗಿದ್ದರೆ ಈ ನಾಡು ಹೆಚ್ಚು ಸುಭಿಕ್ಷವಾಗಿರುತ್ತಿತ್ತು ಎಂದು ಲೇಖಕ, ಕನ್ನಡ ಪರ ಚಿಂತಕರೂ ಆದ ಕೆ.ರಾಜಕುಮಾರ್ ಅಭಿಪ್ರಾಯಿಸಿದರು.

ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಕಸಾಪ 108ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು 'ಕನ್ನಡ ಮನಸ್ಸುಗಳ ಮೇಲೆ ಕಸಾಪ ಬೀರಿದ ಪ್ರಭಾವ' ಕುರಿತು ಉಪನ್ಯಾಸ ನೀಡಿದರು.

ಕಸಾಪ ಸಂಸ್ಥಾಪನಾ ದಿನಾಚರಣೆ ಜೊತೆಗೆ ದಾವಣಗೆರೆ ಜಿಲ್ಲೆಯಾಗಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಆರಂಭವಾಗಿ 25 ವರ್ಷಗಳು ಕಳೆದ ಹಿನ್ನೆಲೆಯಲ್ಲಿ ರಜತ ಸಂಭ್ರಮವೂ ಇದಾಗಿದೆ ಎಂದು ಹೇಳಿದರು.

ಹಲವು ಸಂಸ್ಥೆಗಳು ಚಿಕ್ಕದಾಗಿ ಆರಂಭವಾಗಿ ದೊಡ್ಡದಾಗಿ ಬೆಳೆಯಬೇಕೆಂಬ ಆಶಯದ ನಡುವೆಯೇ ಕಮರುತ್ತವೆ. ಮತ್ತೆ ಕೆಲವು ದೊಡ್ಡ ಮಟ್ಟದಲ್ಲಿ ಆರಂಭವಾಗಿ ಮುಂದೆ ಬೆಳೆಯದೇ ಹೋಗುತ್ತವೆ. ಆದರೆ 107 ವರ್ಷಗಳನ್ನು ಕ್ರಮಿಸಿರುವ ಕನ್ನಡ ಸಾಹಿತ್ಯ ಪರಿಷತ್ ಕೇವಲ ಆರಂಭ ಶೂರತ್ವದ ಸಂಸ್ಥೆಯಾಗಿರಲಿಲ್ಲ ಎಂದರು.

ಭೂತ, ವರ್ತಮಾನ, ಭವಿಷ್ಯತ್ ಕಾಲದಲ್ಲೂ ತನ್ನ ಅಸ್ತಿತ್ವದ ಬೇರುಗಳನ್ನು ಈ ನಾಡಿನ ನೆಲದ ಆಳಕ್ಕೆ ಇಳಿಸಿ ದೃಢವಾಗಿ ಬೆಳೆದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರಿನಲ್ಲಿ ಕೇವಲ 10 ರೂಪಾಯಿ ಕೊಠಡಿಯೊಂದರಲ್ಲಿ ಆರಂಭವಾಗಿ ಇದೀಗ 30 ಜಿಲ್ಲಾ ಘಟಕ, 282 ತಾಲ್ಲೂಕು ಘಟಕಗಳನ್ನು ಹೊಂದಿದ್ದು, ಹೋಬಳಿ ಘಟಕಗಳನ್ನೂ ಮಾನ್ಯ ಮಾಡಲಿದೆ.' ಕನ್ನಡ', 'ಸಾಹಿತ್ಯ' ಹಾಗೂ 'ಪರಿಷತ್' ಮೂರು ಹೆಸರುಗಳನ್ನೊಳಗೊಂಡ ಸಂಸ್ಥೆ ಇದಾಗಿದ್ದು, ಇದರಲ್ಲಿ ಪರಿಪೂರ್ಣತೆ ಇದೆ. ಜನರನ್ನು ಕೂಡಿಸಿ, ನಾಡನ್ನು ಬೆಳೆಸುವ ಸದುದ್ದೇಶ ಹೊಂದಿರುವ ಸಂಸ್ಥೆ, ನಿರಂತರ ಜನಮಾನಸದ ಮೇಲೆ ತನ್ನ ಪ್ರಭಾವ ಬೀರುತ್ತಿದೆ ಎಂದರು.

ಕಸಾಪ ಹೊರತುಪಡಿಸಿದರೆ ಇಡೀ ಜಗತ್ತಿನಲ್ಲಿಯೇ ನಾಡು-ನುಡಿಯ ಸಮರ್ಥನೆಗಾಗಿ, ನಾಡಿನ ಜನರ ಹಿತ ಕಾಯುವ ಬೇರಾವ ಸಂಘಟನೆಯೂ ಇಲ್ಲ ಎಂದ ರಾಜಕುಮಾರ್, ಶೀಘ್ರವೇ ಒಂದು ನಿವೇಶನ ಪಡೆದು ನಿರ್ದಿಷ್ಟ ಕಾರ್ಯಸೂಚಿ ಇಟ್ಟುಕೊಂಡು ರಾಜ್ಯದ ಬೇರೆಲ್ಲಾ ಜಿಲ್ಲಾ ಘಟಕಗಳಿಗಿಂತ ದಾವಣಗೆರೆ ಘಟಕ ಮಾದರಿಯಾಗಲಿ ಎಂದು ಆಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ. ಸುರೇಶ್, ಜನ್ಮದಿನದಂತೆ ಕನ್ನಡ ಸಾಹಿತ್ ಪರಿಷತ್ ಸಂಸ್ಥಾಪನಾ ದಿನವನ್ನೂ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯ ಎಂದರು.

ಕನ್ನಡ ನಾಡು-ನುಡಿಗಾಗಿ ಒಂದು ಸಂಸ್ಥೆ (3ನೇ ಪುಟಕ್ಕೆ)

# ತಾಳಿ ಕಟ್ಟಿದ ನಂತರವೂ ತಾಳಿಕೊಂಡು ಬಾಳು ನಡೆಸಿ

### ಮುರುಘಾಮಠದಲ್ಲಿನ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಶರಣರು

ಚಿತ್ರದುರ್ಗ, ಮೇ 5- ತಾಳಿ ಕಟ್ಟುವವರೆಗೆ ತಾಳಿ. ಕಟ್ಟಿದ ಮೇಲೂ ತಾಳಿಕೊಂಡು ನೆಮ್ಮದಿಯಿಂದ ಬಾಳು ನಡೆಸಬೇಕೆಂದು ಡಾ. ಶಿವಮೂರ್ತಿ ಮುರುಘಾ ಶರಣರು ಕರೆ ನೀಡಿದರು.

ನಗರದ ಬಸವಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ) ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಮೂವತ್ತೆರಡನೆ ವರ್ಷದ ಐದನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ 41 ಜೋಡಿಗಳ ವಿವಾಹ ನೆರವೇರಿಸಿ ಶ್ರೀಗಳು ಮಾತನಾಡಿದರು.

ಮದುವೆ ಮಾನವ ಬದುಕಿನಲ್ಲಿ ಅನಿರೀಕ್ಷಿತ ಸಂದರ್ಭ. ಮಾನವ ಲೋಕದಲ್ಲಿ ಮಾತ್ರ ಮದುವೆಗಳು. ಮಾನವ ಸೃಷ್ಟಿಕರ್ತ, ಬುದ್ಧಿವಂತ, ಹೃದಯವಂತ, ಧರ್ಮವಂತ. ಅವನಿಗೆ ಮಾತ್ರ ಮದುವೆ ಮಾಡಿಸಬೇಕು. ಅವನ ಮೆದುಳಿನಲ್ಲಿ ಅನೇಕ ಉತ್ತಮ ಬುದ್ದಿ ಸುಳಿಯುತ್ತದೆ. ಉತ್ತಮ ಆಲೋಚನೆ ಜೊತೆ ಸಾಗಬೇಕು. ಮನೆ ಮುರಿಯಲು ಒಂದು ದುರಾಲೋಚನೆ ಸಾಕು. ಸದ್ವಿಚಾರದ ಜೊತೆ ಸಾಗಬೇಕು. ಸಮಾಜದಲ್ಲಿ ಜಾತಿಯ ಚೌಕಟ್ಟಿನೊಳಗೆ ಮದುವೆ ನಡೆಯುತ್ತಿವೆ. ಇಲ್ಲಿ ಅನೇಕ ಜಾತಿಯ ವಧು-ವರರು ಇದ್ದಾರೆ. ಜಾತಿ ಆಧಾರಿತ ಮದುವೆಗಳು ಪ್ರೀತಿ ಆಧಾರಿತ (2ನೇ ಪುಟಕ್ಕೆ)



## ಅನುಭವ ಮಂಟಪ ನಿರ್ಮಾಣಕ್ಕೆ 532 ಕೋಟಿ ರೂ. ಬಿಡುಗಡೆ

ಬೆಂಗಳೂರು, ಮೇ 5 - ಬಸವ ಕಲ್ಯಾಣದಲ್ಲಿ 532 ಕೋಟಿ ರೂ. ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವತಿಯಿಂದ 532 ಕೋಟಿ ರೂ. ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಾಣವಾಗಲಿದೆ. ಮೂರು ವರ್ಷಗಳಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಳಿಸುವಂತೆ ಮುಖ್ಯಮತ್ರಿ ತಿಳಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

12ನೇ ಶತಮಾನದಲ್ಲಿ ಬಸವೇಶ್ವರರು ನಡೆಸಿದ ಸಾಮಾಜಿಕ ಕ್ರಾಂತಿ ಪ್ರತಿಬಿಂಬಿಸುವ ರೀತಿಯಲ್ಲಿ ಅನುಭವ ಮಂಟಪ ನಿರ್ಮಾಣವಾಗಲಿದೆ. ಅನುಭವ ಮಂಟಪದಲ್ಲಿ ಶರಣರ ಕುರಿತ ಕಿರುಚಿತ್ರಗಳ ಪ್ರದರ್ಶನ ಹಾಗೂ ಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆ ಇರಲಿದೆ ಎಂದು ತಿಳಿಸಲಾಗಿದೆ.

## ವಾರಾಂತ್ಯದಲ್ಲೂ ಎಲ್‌ಐಸಿ ಷೇರುಗಳ ಮಾರಾಟ

ನವದೆಹಲಿ, ಮೇ 5- ಎಲ್.ಐ.ಸಿ. ಷೇರುಗಳ ಮಾರಾಟದ ಐ.ಪಿ.ಓ. ವಾರಾಂತ್ಯದಲ್ಲೂ ಮುಂದುವರೆ ಯಲಿದೆ. ಇದೇ ಮೊದಲ ಬಾರಿಗೆ ಐ.ಪಿ.ಓ. ಒಂದಕ್ಕೆ ಈ ವಿಶೇಷ ಅವಕಾಶ ನೀಡಲಾಗಿದೆ.

ಈ ಹಿಂದೆ ಶನಿವಾರದವರೆಗೆ ಮಾತ್ರ ಬಿಡ್ಡಿಂಗ್‌ಗೆ ಅವಕಾಶ ನೀಡಲಾಗಿತ್ತು. ಈಗ ಶನಿವಾರ ಹಾಗೂ ಭಾನು (3ನೇ ಪುಟಕ್ಕೆ)

## ಜುಲೈನಲ್ಲಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳು

ನವದೆಹಲಿ, ಮೇ 5 – ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಡಿಜಿಟಲ್ ಬ್ಯಾಂಕಿಂಗ್ ಘಟಕಗಳು ಈ ವರ್ಷ ಜುಲೈನಲ್ಲಿ ಕಾರ್ಯಾರಂಭ ಮಾಡಲಿವೆ. ಸ್ವಾತಂತ್ರ್ಯ ದೊರೆತ 75ನೇ ವರ್ಷದಲ್ಲಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕ ಸ್ಥಾಪಿಸುವುದಾಗಿ ತಿಳಿಸಲಾಗಿತ್ತು. ಈ ರೀತಿಯ (2ನೇ ಪುಟಕ್ಕೆ)

## ನಗರಕ್ಕೆ ನಾಳೆ ಗೋಸಾಯಿ ಮಠದ ಮಂಜುನಾಥ ಭಾರತಿ ಶ್ರೀ

ದಾವಣಗೆರೆ, ಮೇ 5 - ಬೆಂಗಳೂರಿನ ಭವಾನಿದತ್ತ ಪೀಠದ ಗೋಸಾಯಿ ಮಹಾಸಂಸ್ಥಾನ ಮಠದ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿಯವರನ್ನು ಅಭಿನಂದಿಸುವ ಸಮಾರಂಭವು ನಾಡಿದ್ದು ದಿನಾಂಕ 7ರ ಶನಿವಾರ ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷರೂ ಆಗಿರುವ ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಾಧವ್, ಜಿಲ್ಲಾ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದಿಂದ ಈ ಸಮಾರಂಭವನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9 ಗಂಟೆಗೆ ಶ್ರೀಗಳನ್ನು ದುರ್ಗಾಂಬಿಕಾ ದೇವಸ್ಥಾನದಿಂದ ಅದ್ದೂರಿ ಮೆರವಣಿಗೆಯಲ್ಲಿ ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪಕ್ಕೆ ಕರೆ ತರಲಾಗುವುದು. ನಂತರ ಬೆಳಿಗ್ಗೆ 11 ಗಂಟೆಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಮರಾಠ ಸಮುದಾಯಕ್ಕೆ ಸೇರಿದ ಹಾನಗಲ್ ಶಾಸಕ ಶ್ರೀನಿವಾಸ ಮಾನೆ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಜಿ. ಮುಳೆ, ಪಾಲಿಕೆ ಉಪ (2ನೇ ಪುಟಕ್ಕೆ)




# WANTED TEACHERS

Well qualified Teachers are required to teach CBSE & ICSE syllabus in reputed institution, Davanagere for all Subjects including P.E

| Class | Salary (Up to) |
| --- | --- |
| 1st to 2nd Std | 20,000/- |
| 3rd to 5th Std | 25,000/- |
| 6th to 8th Std | 30,000/- |
| 9th to 10th Std | 40,000/- |

Share your Updated Resume along with Experience to below mentioned E-mail or Whatsapp No

teachers.in9@gmail.com or 96065 70090


## ಕಳಪೆ ಬೀಜ; 148 ವರ್ತಕರ ಲೈಸನ್ಸ್ ರದ್ದು: ಪಾಟೀಲ್



ರಾಣೇಬೆನ್ನೂರು, ಮೇ 5- ಬ್ಯಾಡಗಿಯಲ್ಲಿ ಕಳಪೆ ಬೀಜ ಮಾರಾಟ ಮಾಡುತ್ತಿದ್ದವರನ್ನು ಹುಡುಕಿ 755 ಮೊಕದ್ದಮೆಗಳನ್ನು ದಾಖಲಿಸಿ, 148 ವರ್ತಕರ ಲೈಸೆನ್ಸ್ ರದ್ದುಪಡಿಸಿದ್ದು, 14 ಸಾವಿರ ಕ್ವಿಂಟಾಲ್ ಕಳಪೆ ಬೀಜಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

ಅವರು ರಾಣೇಬೆನ್ನೂರಿನಲ್ಲಿ ಕೃಷಿ ಮೂಲಭೂತ ಸೌಕರ್ಯ ಯೋಜನೆಯ ಉಪ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಕಳಪೆ ಬೀಜ, ಔಷಧಿ ಹಾಗೂ ಗೊಬ್ಬರಗಳ ಮಾರಾಟದಲ್ಲಿ ರೈತರಿಗೆ ಮೋಸ ಮಾಡುವ ವರ್ತಕ ಎಷ್ಟೇ ಪ್ರತಿಷ್ಠಿತನಿರಲಿ ಅವರ ಜೊತೆ ರಾಜೀ ಇಲ್ಲ. ಒಂದಿಲ್ಲೊಂದು ಕಾರಣಗಳಿಂದ ನಿರಂತರ ಸಂಕಷ್ಟದಲ್ಲಿರುವ ರೈತರ ಪರವಾಗಿ ನಮ್ಮ ಸರ್ಕಾರ ನಿಲ್ಲುತ್ತದೆ ಎಂದು ಸಚಿವ ಪಾಟೀಲ ಹೇಳಿದರು.

ವಿವಿಧ ಯೋಜನೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬಹಳಷ್ಟು ಸಬ್ಸಿಡಿಗಳನ್ನು ಕೊಡುತ್ತಿದೆ ಎಂದು ವಿವರಿಸಿದ ಸಚಿವರು, ಪದವಿ ಕಾಲೇಜುಗಳಲ್ಲಿ ಶೇ. 50ರಷ್ಟು ರೈತರ ಮಕ್ಕಳಿಗೆ ಮೀಸಲಾತಿ ಕಲ್ಪಿಸಿದೆ. ರೈತರು ಕೃಷಿ ಜೊತೆಗೆ ಹೈನುಗಾರಿಕೆ, ಕೋಳಿ, ಕುರಿ ಮತ್ತು ಜೇನು ಮುಂತಾದ ಉಪ ಕಸುಬುಗಳನ್ನು ಮಾಡಿಕೊಂಡು ತಮ್ಮ (2ನೇ ಪುಟಕ್ಕೆ)

# ಕನ್ನಡಿಗರು ಮಾತೃಭಾಷೆಗೆ ಆದ್ಯತೆ ನೀಡಬೇಕು

## ಶಾಸಕ ಎಸ್.ರಾಮಪ್ಪ ಕರೆ




ಹರಿಹರ, ಮೇ 5 - ಕನ್ನಡಿಗರು ಇತರೆ ಭಾಷೆಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವುದಕ್ಕಿಂತ ಮಾತೃಭಾಷೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಶಾಸಕ ಎಸ್. ರಾಮಪ್ಪ ಕರೆ ನೀಡಿದರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ಸಭಾಂಗಣದಲ್ಲಿ ಇಂದು ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 108 ನೇ ಸಂಸ್ಥಾಪನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಯ ಉಳಿವಿಗಾಗಿ ಮತ್ತು ಬೆಳವಣಿಗೆಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಾಯ, ಸರ್ ಮಿರ್ಜಾ ಇಸ್ಮಾಯಿಲ್ ಸೇರಿದಂತೆ ದಾರ್ಶನಿಕರು, ಶರಣರು, ವಾಗ್ಮಿಗಳು, ಚಿಂತಕರು, ಸಾಹಿತಿಗಳು ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ್ದಾರೆ ಎಂದರು.

ಅವರ ಆಸೆಯಂತೆ ಕನ್ನಡ ನಾಡಿನ ಭಾಷೆಯ ಬೆಳವಣಿಗೆಗೆ ಮತ್ತು ಪ್ರಗತಿಗಾಗಿ ಎಲ್ಲರೂ ಶ್ರಮಿಸುವುದಕ್ಕೆ ಮುಂದಾಗಬೇಕಾಗಿದೆ ಎಂದು ಹೇಳಿದರು.

ವಿಶ್ರಾಂತ ಪ್ರಾಧ್ಯಾಪಕ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಸ್.ವಿ. ಪಟ್ಟಣಶೆಟ್ಟಿ ಮಾತನಾಡಿ, ಕನ್ನಡದ ಮನಸ್ಸುಗಳ ಮೇಲೆ ಕನ್ನಡ ಸಾಹಿತ್ಯ ಪರಿಷತ್ತು ಬೀರಿದ ಪ್ರಭಾವದಿಂದಾಗಿ ಕನ್ನಡದ ಮೌಲ್ಯ ಹಾಗೂ ಆಚಾರ, ವಿಚಾರಕ್ಕೆ ಹೆಚ್ಚಿನ ಘನತೆಯನ್ನು ತಂದು ಕೊಟ್ಟಿದೆ ಎಂದರು.

ಇತ್ತೀಚೆಗೆ ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಜೋಶಿ ಅವರು ಸರ್ವಾಧಿಕಾರ ಧೋರಣೆಯ ಆಡಳಿತ ಮಾಡುವುದಕ್ಕೆ ಮುಂದಾಗಿರುವುದು ಕನ್ನಡ ಸಾಹಿತ್ಯ ಪರಿಷತ್ತಿನ ವಿರೋಧಿ ಕೆಲಸವಾಗಿದೆ. ಇದರಿಂದ ಹೊರಬರುವ ಕೆಲಸವನ್ನು ಮಾಡಲಿ ಎಂದು ಹೇಳಿದರು.

ಸಾಹಿತಿ ಹುಲಿಕಟ್ಟಿ ಚೆನ್ನಬಸಪ್ಪ ಮಾತನಾಡಿ, ಕನ್ನಡಿಗರಲ್ಲಿ ಆತ್ಮ ಸ್ಥೈರ್ಯ ತುಂಬುವ ಮೂಲಕ ಹರಿದು ಹಂಚಿ ಹೋಗಿದ್ದ ಕನ್ನಡಿಗರನ್ನು ಒಂದುಗೂಡಿಸಬೇಕೆನ್ನುವ ಆಕಾಂಕ್ಷೆಯಿಂದ 1915, ಮೇ 5 ರಂದು ಕರ್ನಾಟಕ ಸಾಹಿತ್ಯ ಪರಿಷತ್ತು ಉದಯವಾಯಿತು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಎಲ್ಲಾ ರೀತಿಯ ಮಾಹಿತಿ ಇರಲಿ ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಈ ವೇಳೆ ನಿಕಟ ಪೂರ್ವ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಕಲೀಂ ಬಾಷಾ, ಎಸ್.ವಿ. ಪಟ್ಟಣಶೆಟ್ಟಿ ಇವರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ನಗರಸಭೆ ಅಧ್ಯಕ್ಷರಾದ ಶಾಹೀನಾಬಾನು ದಾದಾಪೀರ್, ಎಸ್.ಜೆ.ವಿ.ಪಿ ಕಾಲೇಜು ಕಾರ್ಯದರ್ಶಿ ಆರ್.ಟಿ. ಪ್ರಶಾಂತ್, ಜೆ ಕಲೀಂ ಭಾಷಾ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಎಸ್.ಜೆ.ವಿ.ಪಿ. ಕಾಲೇಜು ಪ್ರಾಂಶುಪಾಲರಾದ ಎಸ್.ಜೆ. ಶಾರದಮ್ಮ, ಹಿರಿಯ ಸಾಹಿತಿಗಳಾದ ಸುಬ್ರಹ್ಮಣ್ಯ ನಾಡಿಗೇರ, ಹೆಚ್.ಕೆ.ಕೊಟ್ರಪ್ಪ, ಹೆಚ್.ನಿಜಗುಣ, ರಕ್ಷಣಾ ವೇದಿಕೆಯ ನಾಗರಾಜ್ ಮೆಹರ್ವಾಡೆ, ಸದಾನಂದ ಕುಂಬಳೂರು, ಕನ್ನಡ ಸಾಹಿತ್ಯ ಪರಿಷತ್‌ನ ಸಂಚಾಲಕ ಎ. ರಿಯಾಜ್ ಆಹ್ಮದ್, ಹರಿಹರ ಗೌರವ ಕಾರ್ಯದರ್ಶಿಗಳಾದ ಎಂ. ಚಿದಾನಂದ ಕಂಚಿಕೇರಿ, ಬಿ.ಬಿ. ರೇವಣನಾಯ್ಕ್, ಖಜಾಂಚಿ ವಿಜಯ ಮಹಾಂತೇಶ್, ಈಶಪ್ಪ ಬೂದಿಹಾಳ, ವಿಜಯಕುಮಾರ್ ಓಲೇಕಾರ್, ಡಿ. ಡಿ. ಸಿಂಧಗಿ, ಹರಿ ಜಾದುಗಾರ, ನಾಗರಾಜ್, ಎನ್.ಇ. ಸುರೇಶ್, ಶ್ರೀಧರ್‌ಮಯ್ಯ, ಯಕ್ಕೆಗೊಂದಿ ರುದ್ರೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಭಿದಾಲಿ, ನಗರಸಭೆ ಮಾಜಿ ಸದಸ್ಯ ಹಂಚಿನ ನಾಗಪ್ಪ ಹಾಗು ಇತರರು ಹಾಜರಿದ್ದರು.

ಪ್ರಾರ್ಥನೆಯನ್ನು ಪರಮೇಶ್ವರಪ್ಪ ಕತ್ತಿಗೆ ನೆರವೇರಿಸಿದರು. ಮಾಧುರಿ, ರೇಖಾ ಸಂಗಡಿಗರು ಹಾಡಿದರು. ಸ್ವಾಗತ ಕುಬೇಂದ್ರಪ್ಪ, ನಿರೂಪಣೆ ಬಿ. ಬಿ. ರೇವಣನಾಯ್ಕ್, ವಂದನಾರ್ಪಣೆಯನ್ನು ಎಂ. ಚಿದಾನಂದ ಕಂಚಿಕೇರಿ ನೆರವೇರಿಸಿದರು.

# ಹರಿಹರದಲ್ಲಿ ನಾಳೆ 'ಜಲಧಾರೆ' ಕಾರ್ಯಕ್ರಮ

## ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಕಾರ್ಯಕ್ರಮದಲ್ಲಿ ಭಾಗಿ

ಹರಿಹರ, ಮೇ 5- ನಾಡಿನಲ್ಲಿ ಜನಪರವಾದ ಸರ್ಕಾರವನ್ನು ಅಸ್ತಿತ್ವಕ್ಕೆ ತರಬೇಕು ಎಂದು ಪಕ್ಷದ ಸಂಕಲ್ಪದೊಂದಿಗೆ ನಾಡಿನಾದ್ಯಂತ ಸಂಚಾರ ಮಾಡುತ್ತಿರುವ ಜನತಾ ಜಲಧಾರೆ ಕಾರ್ಯಕ್ರಮ ನಗರದಲ್ಲಿ ನಾಡಿದ್ದು ದಿನಾಂಕ 7 ರಂದು ಅದ್ದೂರಿಯಾಗಿ ನಡೆಯಲಿದೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹೇಳಿದರು.

ನಗರದ ಹೆಚ್. ಶಿವಪ್ಪ ಸರ್ಕಲ್‌ನಲ್ಲಿರುವ ಜೆಡಿಎಸ್ ಕಚೇರಿಯ ಸಭಾಂಗಣದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಭ್ರಷ್ಟಾಚಾರದ ಬಿಜೆಪಿ ಸರ್ಕಾರವನ್ನು ಮತ್ತು ಅಧಿಕಾರಕ್ಕಾಗಿ ಕಿತ್ತಾಡುತ್ತಿರುವ ಕಾಂಗ್ರೆಸ್ ಪಕ್ಷದವರನ್ನು ನೋಡಿ ರಾಜ್ಯದಾದ್ಯಂತ ಜನರು ಬೇಸತ್ತಿದ್ದಾರೆ. ಹಾಗಾಗಿ ಎಲ್ಲಾ ವರ್ಗದವರ ಹಿತಕ್ಕಾಗಿ ಹಾಗೂ ನಾಡಿನ ಜನರಿಗೋಸ್ಕರ ಜನಪರವಾದ ಸರ್ಕಾರ ಬೇಕಾಗಿರುವುದರಿಂದ ಜನರು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಆಡಳಿತವನ್ನು ಬಯಸುತ್ತಿದ್ದಾರೆ ಎಂದು ಹೇಳಿದರು.

ಇದನ್ನು ಮನಗಂಡು ಕುಮಾರಸ್ವಾಮಿಯವರು ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂಬ ಉದ್ದೇಶದಿಂದ ನಾಡಿನಾದ್ಯಂತ ಜನತಾ ಜಲಧಾರೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ದಿನಾಂಕ 7 ರಂದು ಬೆಳಗ್ಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಆಗಮಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಕುಮಾರಸ್ವಾಮಿಯವರು ಆಗಮಿಸಲಿದ್ದಾರೆ. ಅವರನ್ನು ನಗರದ ನೀರಾವರಿ ಇಲಾಖೆಯ ಗಣೇಶ ದೇವಸ್ಥಾನದಿಂದ ಸಾರೋಟೋತ್ಸವದಲ್ಲಿ ಪೂರ್ಣ ಕುಂಭದೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಮೂಲಕ ಬರ ಮಾಡಿಕೊಳ್ಳಲಾಗುತ್ತದೆ. ಮೆರವಣಿಗೆಯಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಅಧ್ಯಕ್ಷ ಹೆಚ್.ಕೆ. ಕುಮಾರಸ್ವಾಮಿ, ಶಾಸಕರಾದ ನಾಡಗೌಡ, ರಾಜಾ ವೆಂಕಟಪ್ಪ ನಾಯಕ, ತಿಪ್ಪೇಸ್ವಾಮಿ, ಮಾಜಿ ಎಂಎಲ್‌ಸಿ ಶರವಣ, ಚೌಡರೆಡ್ಡಿ, ಶಾರದ ಪೂರ್ಯಾನಾಯ್ಕ್, ತಿಮ್ಮರಾಯಪ್ಪ, ಚಿತ್ರದುರ್ಗ ಯಶೋಧರ, ಶಿವಮೊಗ್ಗ ಶ್ರೀಕಾಂತ್, ಸೇರಿದಂತೆ ಪಕ್ಷದ ಹಲವಾರು ನಾಯಕರು ಆಗಮಿಸಲಿದ್ದಾರೆ.



ವೇದಿಕೆಯನ್ನು 30x70 ಅಡಿಯಲ್ಲಿ ಸಿದ್ಧತೆ ಮಾಡಲಾಗಿದೆ. ಸುಮಾರು 10 ಸಾವಿರ ಆಸನ ಮತ್ತು ಕಾರ್ಯಕರ್ತರಿಗೆ ಊಟ, ನೀರು, ಮಜ್ಜಿಗೆ, ವಾಹನ ಪಾರ್ಕಿಂಗ್ ಸೇರಿದಂತೆ ವಿವಿಧ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಪರಮೇಶ್ವರ ಗೌಡ್ರು, ಬಸಟ್ಟೆಪ್ಪ ಬೇವಿನಹಳ್ಳಿ, ನಗರಸಭೆ ಸದಸ್ಯರಾದ ಪಿ.ಎನ್. ವಿರುಪಾಕ್ಷ, ಬಿ. ಅಲ್ತಾಫ್, ಆರ್. ಸಿ. ಜಾವೇದ್, ಮುಖಂಡರಾದ ಅಂಗಡಿ ಮಂಜುನಾಥ್, ಮನ್ಸೂರ್ ಮದ್ದಿ, ಸುರೇಶ್ ಚಂದಾಪೂರ್, ನಾಗರಾಜ್ ಅಮರಾವತಿ, ಅಡಕಿ ಕುಮಾರ್, ಲತಾ ಕೊಟ್ರೇಶ್, ಲಕ್ಷ್ಮಿ ರಾಜಚಾರ್, ರಾಗಿಣಿ, ಆಸೀಫ್ , ನಂಜಪ್ಪ ಜಿ. ಇತರರು ಹಾಜರಿದ್ದರು.

# ತಾಳಿಕೊಂಡು ಬಾಳು ನಡೆಸಿ

(1ನೇ ಪುಟದಿಂದ) ಮದುವೆಗಳಾಗಿ ಪರಿವರ್ತನೆಯಾಗಬೇಕು ಎಂದು ಹೇಳಿದರು.

ತಿಪ್ಪಾಯಿಕೊಪ್ಪದ ಶ್ರೀಗುರು ಮೂಕಪ್ಪ ಶಿವಯೋಗಿಗಳ ಮಠದ ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು ಮಾತನಾಡಿ, ಶರಣರ ಆದರ್ಶ ಜೀವನ ನಮಗೆ ಮಾರ್ಗದರ್ಶನ. ಮದುವೆ ಎಂದರೆ ಎರಡು ಮನಸ್ಸುಗಳ ಮಿಲನ. ಭಾರತೀಯ ಪರಂಪರೆಯಲ್ಲಿ ವಿವಾಹಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಮುರುಘಾ ಶರಣರ ಮಾರ್ಗದರ್ಶನದಲ್ಲಿ ವಿವಾಹ ನೆರವೇರುತ್ತಿದೆ. ಪ್ರತಿಯೊಬ್ಬರು ನಂಬಿಕೆಗಳ ಮಧ್ಯೆ ಬದುಕಬೇಕು. ಆಗ ಮಾತ್ರ ಜೀವನ ಸುಗಮವಾಗುತ್ತದೆ ಎಂದರು.

ಮುಖ್ಯಅತಿಥಿ ಮಲ್ಲಿಕಾರ್ಜುನ ಪಿ. ಭಂಗಿ ಮಾತನಾಡಿದರು. ಕಾರ್ಯಕ್ರಮದ ದಾಸೋಹಿಗಳಾದ ಎಂ.ಜೆ. ಮಲ್ಲಿಕಾರ್ಜುನ್ ವೇದಿಕೆಯಲ್ಲಿದ್ದರು.

ಕುಂಬಾರ (ವರ) - ಆದಿಕರ್ನಾಟಕ (ವಧು) ಮತ್ತು ಲಿಂಗಾಯತ (ವರ) - ನಾಯಕ (ವಧು) ಎರಡು ಜೋಡಿ ಅಂತರ್ಜಾತಿ ಸೇರಿದಂತೆ 41 ಜೋಡಿಗಳು ವಿವಾಹವಾದರು.

ಮರಳೇ ಗವಿಮಠದ ಡಾ. ಮುಮ್ಮಡಿ ಶಿವರುದ್ರ ಸ್ವಾಮಿಗಳು, ಹಾವೇರಿ ಹೊಸಮಠದ ಶ್ರೀ ಬಸವಶಾಂತ ಲಿಂಗ ಸ್ವಾಮಿಗಳು, ನಿಪ್ಪಾಣಿ ಶ್ರೀ ಮುರುಘೇಂದ್ರ ಮಠದ ಶ್ರೀ ಬಸವ ಮಲ್ಲಿಕಾರ್ಜುನ ಸ್ವಾಮಿಗಳು, ಎನ್.ಆರ್. ಪುರ ಬಸವ ಕೇಂದ್ರದ ಶ್ರೀ ಬಸವಯೋಗ ಪ್ರಭು ಸ್ವಾಮಿಗಳು, ಕುಂಬಾರ ಗುರುಪೀಠದ ಶ್ರೀ ಬಸವಕುಂಬಾರ ತಿಪ್ಪೇಸ್ವಾಮಿ ಸ್ವಾಮಿಗಳು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎಸ್.ಕೆ.ಬಸವರಾಜನ್, ಕೆ.ಇ.ಬಿ. ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ, ಸೊಂಡೇಕೊಳ ಶ್ರೀನಿವಾಸ್ ಮೊದಲಾದವರಿದ್ದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ಮಾಡಿದರು. ವೀರಭದ್ರಪ್ಪ ಸ್ವಾಗತಿಸಿದರು. ಬಸವಲಿಂಗದೇವರು ನಿರೂಪಿಸಿದರು.

# ನಗರಕ್ಕೆ ನಾಳೆ ಗೋಸಾಯಿ ಮಠದ ಮಂಜುನಾಥ ಭಾರತಿ ಶ್ರೀ

(1ನೇ ಪುಟದಿಂದ) ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿರಾವ್ ಜಾಧವ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎ.ವೈ. ರಾಕೇಶ್ ಜಾಧವ್, ಪಾಲಿಕೆ ನಾಮ ನಿರ್ದೇಶಿತ ಸದಸ್ಯ ಹೆಚ್.ಎಸ್. ಗಣೇಶ್‌ರಾವ್ ಪವಾರ್, ದೂಡಾ ಸದಸ್ಯ ಟಿ. ಮಾರುತಿರಾವ್ ಘಾಟ್ಗೆ, ದಿಶಾ ಸದಸ್ಯೆ ಭಾಗ್ಯ ಪಿಸಾಳೆ, ಗಣೇಶ ಯುವ ರಿಫೈನರಿ ಮಂಡಳಿ ಅಧ್ಯಕ್ಷ ದಗಡೋಜಿರಾವ್ ಸಾಳಂಕಿ, ಮಂಡಳಿಯ ಖಜಾಂಚಿ ವಿಕಾಸ್ ದೇವಕರ್ ಅವರುಗಳನ್ನು ಸನ್ಮಾನಿಸಲಾಗುವುದು.

ಸಮಾರಂಭದ ಅಧ್ಯಕ್ಷತೆಯನ್ನು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶ್ ರಾವ್ ಜಾಧವ್ ವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮರಾಠದ ಸಮಾಜದ ಮುಖಂಡರಾದ ಡಿ. ಮಾಲತೇಶ್‌ರಾವ್ ಜಾಧವ್, ಸುರೇಶ್ ಶಿಂಧೆ, ಗಣೇಶ್ ರಾವ್, ಬಸವರಾಜ ಮಾನೆ, ಜಿ. ಯಲ್ಲಪ್ಪ ಢಮಾಳೆ, ಪ್ರವೀಣ್, ಜಯಣ್ಣ ಜಾಧವ್ ಮತ್ತಿತರರು ಉಪಸ್ಥಿತರಿದ್ದರು.

# ನಗರಗಳ ಅಕ್ರಮ ಮನೆಗಳ ಸಕ್ರಮ

(1ನೇ ಪುಟದಿಂದ) ರೂಪಾಯಿಗಳ ಯೋಜನೆ ಸಿದ್ಧವಾಗಿದ್ದು, ಮುಂದಿನ ಐದು ವರ್ಷಗಳಲ್ಲಿ ಇದು ಕಾರ್ಯಗತವಾಗಲಿದೆ ಎಂದರು.

ಪಿರಿಯಾಪಟ್ಟಣ, ರಾಯಭಾಗ, ಹಿರೇಕೆರೂರು, ಶಿಗ್ಗಾವಿ, ಯಲ್ಲಾಪುರ ಸೇರಿದಂತೆ 24 ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸಲು 1500 ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ರೂಪಿಸಲಾಗಿದ್ದು, ನದಿ ಮೂಲಗಳಿಂದ ಈ ಪಟ್ಟಣಗಳಿಗೆ ನೀರು ಒದಗಿಸಲಾಗುವುದು ಎಂದರು.

ಧರ್ಮಸ್ಥಳದಲ್ಲಿ ಭಕ್ತಾದಿಗಳಿಗೆ ಅನುಕೂಲ ಒದಗಿಸಿಕೊಡುವ ದೃಷ್ಟಿಯಿಂದ 27 ಕೋಟಿ ರೂಪಾಯಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯದ ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ರೈತರಿಂದ ಭೂಮಿ ಪಡೆದು ಶೇ. 50:50 ಅನುಪಾತದ ಆಧಾರದ ಮೇಲೆ ನಿವೇಶನಗಳನ್ನು ನಿರ್ಮಿಸುವ ಕೆಲಸ ನಡೆಯುತ್ತಿದೆ. ರೈತರಿಂದ ಪಡೆದ ಭೂಮಿಯನ್ನು ಅಭಿವೃದ್ಧಿಪಡಿಸಿದ ಮೇಲೆ ರೈತರಿಗೆ ಶೇ. ಐವತ್ತರಷ್ಟು ಪಾಲು ಕೊಡಲಾಗುವುದು. ಉಳಿದ ಶೇ. ಐವತ್ತರಷ್ಟು ನಿವೇಶನಗಳಿಂದ ಬರುವ ಆದಾಯವನ್ನು ನಗರಾಭಿವೃದ್ಧಿ ಪ್ರಾಧಿಕಾರಿಗಳಿಗೆ ಒದಗಿಸಲಾಗುವುದು ಎಂದರು.

# ಎನ್‌ಇಪಿ ವಿರೋಧಿಸಿ ಸಹಿ ಸಂಗ್ರಹ




ದಾವಣಗೆರೆ, ಮೇ 5- ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಜಿಲ್ಲಾ ಸಮಿತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಎನ್.ಇ.ಪಿ. 2020 ಅನ್ನು ವಿರೋಧಿಸಿ ಮೊನ್ನೆ ಬೃಹತ್ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಎಐಡಿಎಸ್ ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ಸೇರಿದಂತೆ ಇತರರು ಇದ್ದರು.

# ವರ್ತಕರ ಲೈಸನ್ಸ್ ರದ್ದು: ಪಾಟೀಲ್

(1ನೇ ಪುಟದಿಂದ) ಆರ್ಥಿಕತೆಯನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ಕರೆ ನೀಡಿದರು.

ನಾನು ಕೇಳುವ ಮೊದಲೇ ನನ್ನ ಕ್ಷೇತ್ರಕ್ಕೆ ಅವಶ್ಯವಿರುವುದೆಲ್ಲವನ್ನು ಕೊಡುತ್ತಿರುವ ಸಚಿವರು ನಮ್ಮ ತಾಲ್ಲೂಕಿನಲ್ಲಿ ಅಡಿಕೆ ಬೆಳೆ ಹೆಚ್ಚುತ್ತಿದ್ದ ಕಾರಣ ರಾಣೇಬೆನ್ನೂರು ತಾಲ್ಲೂಕನ್ನು ಮಲೆನಾಡು ಅಭಿವೃದ್ಧಿ ವ್ಯಾಪ್ತಿಗೆ ಸೇರಿಸಬೇಕು ಹಾಗೂ ತಮ್ಮ ತಾಲ್ಲೂಕಿನಲ್ಲಿ ಕೊಟ್ಟ ಆಕಳುಗಳನ್ನೂ ಸಹ ನನ್ನ ವಿಧಾನಸಭಾ ಕ್ಷೇತ್ರಕ್ಕೂ ಕೊಡುವಂತೆ ಶಾಸಕ ಅರುಣಕುಮಾರ ಪೂಜಾರ ಸಚಿವರನ್ನು ಒತ್ತಾಯಿಸಿದರು.

15 ಜಿಲ್ಲೆಗಳಲ್ಲಿ ಮಾಡಿ ಅದರ ಸದುಪಯೋಗದ ತಿಳುವಳಿಕೆಯನ್ನು ರೈತರಲ್ಲಿ ಮೂಡಿಸಲು ರೈತರೊಂದಿಗೆ ಒಂದು ದಿನದ ಕಾರ್ಯಕ್ರಮವನ್ನು ಹಾವೇರಿ ಜಿಲ್ಲೆಯಲ್ಲಿ ಮಾಡುವಂತೆ ಕೃಷಿ ನಿರ್ದೇಶಕರಾದ ನಂದಿನಿಕುಮಾರಿ ಸಚಿವರಿಗೆ ಮನವಿ ಮಾಡಿ ರೈತರು ವ್ಯವಸಾಯ ಪದ್ಧತಿಯಲ್ಲಿ ಬದಲಾವಣೆ ತಂದುಕೊಂಡು ತಮ್ಮ ಅಭಿವೃದ್ಧಿ ಮಾಡಿಕೊಳ್ಳುವಂತೆ ತಿಳಿಸಿದರು.

ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ, ರೈತ ಸಂಘದ ಅಧ್ಯಕ್ಷ ಈರಣ್ಣ ಹಲಗೇರಿ, ವರ್ತಕ ಬಸವರಾಜ ಪಾಟೀಲ, ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಂಟಿ ನಿರ್ದೇಶಕ ಮಂಜುನಾಥ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಪ ನಿರ್ದೇಶಕಿ ಜಿ.ಎಸ್. ಸ್ಫೂರ್ತಿ ಸ್ವಾಗತಿಸಿದರು. ಸಹಾಯಕ ನಿರ್ದೇಶಕ ಹಿತೇಂದ್ರಗೌಡಪ್ಪಳವರ ವಂದಿಸಿದರು.

# ಪಂಚಮಸಾಲಿ 'ಸ್ನೇಹ ಕೂಟ'ದಿಂದ ಬಸವ ಜಯಂತಿ ಆಚರಣೆ



ದಾವಣಗೆರೆ, ಮೇ 5- ನಗರದ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ 'ಸ್ನೇಹ ಕೂಟ'ದ ವತಿಯಿಂದ ಬಸವ ಜಯಂತಿಯನ್ನು ಪಂಚಮಸಾಲಿ ಸಮಾಜದ ಜಿಲ್ಲಾ ಕಚೇರಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸ್ನೇಹ ಕೂಟದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಹರಳಹಳ್ಳಿಯಲ್ಲಿ ನೂತನ ಶಿಲಾಮೂರ್ತಿಗಳ ಪ್ರತಿಷ್ಠಾಪನೆ

ಮಲೇಬೆನ್ನೂರು ಸಮೀಪದ ಹರಳಹಳ್ಳಿ ಗ್ರಾಮದ ಅದಿದೇವತೆ ಶ್ರೀ ದಂಡಿ ದುರ್ಗಾಂಬಿಕಾದೇವಿ ಹಾಗೂ ಶ್ರೀ ವರಸಿದ್ಧಿವಿನಾಯಕ ಮತ್ತು ಶ್ರೀ ದುರ್ಗಮ್ಮ ದೇವಿಯ ನೂತನ ಶಿಲಾಮೂರ್ತಿಗಳ ಸ್ಥಾಪನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ಮತ್ತು ಜನ ಜಾಗೃತಿ ಧಾರ್ಮಿಕ ಸಮಾರಂಭ ಇಂದು 10 ಗಂಟೆಗೆ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗಲಿದೆ. ಉದ್ಘಾಟನೆ : ಜಿ.ಎಂ.ಸಿದ್ದೇಶ್ವರ, ಅಧ್ಯಕ್ಷತೆ : ಎಸ್.ರಾಮಪ್ಪ, ಮುಖ್ಯ ಅತಿಥಿಗಳು : ಭೈರತಿ ಬಸವರಾಜ್, ಎಂ.ಪಿ.ರೇಣುಕಾಚಾರ್ಯ, ಕೆ.ಎಸ್.ನವೀನ್, ಎಸ್. ಎಸ್.ಮಲ್ಲಿಕಾರ್ಜುನ್, ಹೆಚ್.ಎಸ್.ಶಿವಶಂಕರ್, ಬಿ.ಪಿ.ಹರೀಶ್ ಮತ್ತಿತರರು.

# ಭಗವಾನ್ ರಾಮಾನುಜಾಚಾರ್ಯರ ವೈಭವದ ರಥೋತ್ಸವ

## ಹಳೇದೇವರ ಹೊನ್ನಾಳಿ ಗ್ರಾಮದಲ್ಲಿ ಸಂಭ್ರಮ

ಹೊನ್ನಾಳಿ, ಮೇ 5- ತಾಲ್ಲೂಕಿನ ಹಳೇದೇವರ ಹೊನ್ನಾಳಿ ಗ್ರಾಮದ ಭಗವಾನ್ ಶ್ರೀ ರಾಮಾನುಜಾಚಾರ್ಯರ ಮಠದಲ್ಲಿ ಗುರುವಾರ ಭಗವಾನ್ ಶ್ರೀ ರಾಮಾನುಜಾಚಾರ್ಯರ 1005ನೇ ಜಯಂತ್ಯುತ್ಸವ ಸಮಾರಂಭ, ಆಚಾರ್ಯರ 6ನೇ ವರ್ಷದ ಆಚರಣೆ ಮತ್ತು ಭಗವಾನ್ ಶ್ರೀ ರಾಮಾನುಜಾಚಾರ್ಯರ ನೂತನ ರಥೋತ್ಸವ ವೈಭವದಿಂದ ನೆರವೇರಿತು.

ಶ್ರೀ ಮಾಧವ ರಂಗನಾಥ ಸ್ವಾಮಿ, ಶ್ರೀ ಬಾಣ ದೇವರು ಪಾಲ್ಗೊಂಡಿದ್ದವು. ಶಂಖಚಕ್ರ, ಮೂರು ನಾಮಗಳ ಅಲಂಕೃತ ಧ್ವಜಗಳನ್ನು ಹೊತ್ತ ಭಕ್ತರು ಶ್ರೀ ಭಗವಾನ್ ರಾಮಾನುಜಾಚಾರ್ಯರಿಗೆ ಜಯಘೋಷ ಹಾಕುತ್ತಾ ರಥದೊಂದಿಗೆ ಸಾಗುತ್ತಿದ್ದರು. ಅಲಂಕೃತ ರಥವು ಶ್ರೀ ರಾಮಾನುಜಾ ಚಾರ್ಯರ ಮಠದ ಆವರಣದಿಂದ ಶ್ರೀ ಮಾಧವ ರಂಗನಾಥ ಸ್ವಾಮಿ ದೇವಸ್ಥಾನದವರೆಗೆ ಸಂಚರಿಸಿತು. ಅಲ್ಲಿಂದ ಪುನಃ ಶ್ರೀ ರಾಮಾನುಜಾಚಾರ್ಯರ ಮಠದ ಆವರಣಕ್ಕೆ ಬಂದು ತಲುಪಿತು.



**ಪಂಚಲೋಹದ ನೂತನ ವಿಗ್ರಹ:** ಶ್ರೀ ರಾಮಾನುಜಾಚಾರ್ಯರ ಪ್ರೇರಣೆಯಂತೆ ಆಚಾರ್ಯರ ರಥೋತ್ಸವವನ್ನು ಕಳೆದ 6 ವರ್ಷಗಳಿಂದ ಮಾಡಿಕೊಂಡು ಬರಲಾಗುತ್ತಿದೆ ಎಂದು ಮಠದ ವ್ಯವಸ್ಥಾಪಕರಾದ ಎಸ್.ಕೆ. ಗೋಪಾಲಯ್ಯ ಹೇಳಿದರು.

ಇದೇ ಸಂದರ್ಭದಲ್ಲಿ 55 ಕೆಜಿ ತೂಕದ ಪಂಚಲೋಹದ ನೂತನ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು ಎಂದು ಅವರು ತಿಳಿಸಿದರು.

ಭಗವಾನ್ ಶ್ರೀ ರಾಮಾನುಜಾಚಾರ್ಯರ ನೂತನ ರಥ ನಿರ್ಮಿಸಲು 20 ಲಕ್ಷ ರೂ.ಗಳಷ್ಟು ಹಣ ವಿನಿಯೋಗವಾಗಿದೆ. ಶ್ರೀ ರಾಮಾನುಜಾಚಾರ್ಯರ ಮಠದಲ್ಲಿ ಭಕ್ತರಿಗೆ ಅನೇಕ ಸವಲತ್ತುಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

# ಹೈಕಮಾಂಡ್ ಕರೆದಾಗ ಹೋಗಲು ಸಿದ್ದ : ಮುಖ್ಯಮಂತ್ರಿ

ಬೆಂಗಳೂರು, ಮೇ 5 – ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಬಿಜೆಪಿ ಹೈಕಮಾಂಡ್ ಕರೆದ ತಕ್ಷಣ ದೆಹಲಿಗೆ ತೆರಳಲು ಸಿದ್ಧವಾಗಿರುವುದಾಗಿ ಮು ಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಸಂಪುಟ ವಿಸ್ತರಣೆಗೆ ಸಂಬಂ ಧಿಸಿದಂತೆ ಬಿಜೆಪಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ ಎಂದ ವರು ತಿಳಿಸಿದ್ದಾರೆ. ಮೇ 5ರಂದು ನಡೆಯಬೇಕಿದ್ದ ಸಂಪುಟ ಸಭೆಯನ್ನು ಮೇ 11ಕ್ಕೆ ಮುಂದೂಡಲಾಗಿತ್ತು. ಸಂಪುಟ ವಿಸ್ತರಣೆಯ ಸಲುವಾಗಿಯೇ ಸಂಪುಟ ಸಭೆ ಮುಂದೂಡಲಾಗಿದೆ ಎಂದು ರಾಜಕೀಯ ವಲಯದಲ್ಲಿ ಹೇಳಲಾಗುತ್ತಿದೆ.

# ಬ್ಯಾಂಕಿಂಗ್ ಘಟಕಗಳು

(1ನೇ ಪುಟದಿಂದ) ಘಟಕಗಳಿಗಾಗಿ ಆರ್.ಬಿ.ಐ. ಕಳೆದ ತಿಂಗಳು ಸಮಗ್ರ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು. ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕುಗಳು, 10 ಖಾಸಗಿ ಬ್ಯಾಂಕುಗಳು ಹಾಗೂ ಒಂದು ಸಣ್ಣ ಹಣಕಾಸು ಸಂಸ್ಥೆ ಈಗಾಗಲೇ ಘಟಕಗಳ ಕಾರ್ಯ ನಿರ್ವಹಣೆಗೆ ಸಿದ್ಧತೆ ಪೂರ್ಣಗೊಳಿಸಿವೆ.

## ಗೀತಾ ಕದರಮಂಡಲಗಿ ನಿಧನ



ಹರಿಹರ ನಗರದ ರಾಜಾ ರಾಂ ಕಾಲೋನಿ ವಾಸಿ, ಹರಿಹರ ನಗರ ಮಹಿಳಾ ಕಾಂಗ್ರೆಸ್ ಮಾಜಿ ಅಧ್ಯಕ್ಷರೂ, ಕೆಪಿಸಿಸಿ ಹಿಂದುಳಿದ ವಿಭಾಗದ ಕಾರ್ಯದರ್ಶಿಗಳೂ ಆದ ಶ್ರೀಮತಿ ಗೀತಾ ಕದರಮಂಡಲಗಿ (49) ಇವರು ದಿನಾಂಕ 5.5.2022ರ ಗುರುವಾರ ಮಧ್ಯಾಹ್ನ 1.30ಕ್ಕೆ ಅನಾರೋಗ್ಯದಿಂದಾಗಿ ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಪುತ್ರ, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.5.2022ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಹರಿಹರದಲ್ಲಿ ನೆರವೇರಲಿದೆ.

# ಆಜಾದಿ ಮೆರವಣಿಗೆ ನಡೆಸಿದ ಶಾಸಕ ಮೇವಾನಿಗೆ ಜೈಲು

ಮೆಹಸಾನ, ಮೇ 5 – ಅನುಮತಿ ಪಡೆಯದೇ 'ಆಜಾದಿ ಮೆರವಣಿಗೆ' ನಡೆಸಿದ ಐದು ವರ್ಷಗಳ ಹಿಂದಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್ ಸ್ವತಂತ್ರ ಶಾಸಕ ಜಿಗ್ನೇಶ್ ಮೇವಾನಿ ಹಾಗೂ ಇತರೆ ಒಂಭತ್ತು ಜನರಿಗೆ ಸ್ಥಳೀಯ ನ್ಯಾಯಾಲಯ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಎನ್.ಸಿ.ಪಿ. ಕಾರ್ಯಕರ್ತೆ ರೇಷ್ಮ ಪಟೇಲ್ ಸೇರಿದಂತೆ ಒಂಭತ್ತು ಜನರು ಐ.ಪಿ.ಸಿ.ಯ ಸೆಕ್ಷನ್ 143 ಉಲ್ಲಂಘಿಸಿದ್ದಾರೆ ಎಂದು ಎ.ಸಿ. ಜೆ.ಎಂ. ಜೆ.ಎ. ಪರ್ಮಾರ್ ಅವರು ತೀರ್ಪಿನಲ್ಲಿ ತಿಳಿಸಿದ್ದಾರೆ.

ಎಲ್ಲಾ ಹತ್ತು ದೋಷಿಗಳಿಗೆ ನ್ಯಾಯಾಲಯ ತಲಾ ಸಾವಿರ ರೂ.ಗಳ ದಂಡವನ್ನೂ ವಿಧಿಸಿದೆ. ಬನಸ್ಕಾಂತ ಜಿಲ್ಲೆಯ ಮೆಹಸಾನಾದಿಂದ ಧನೇರಾವರೆಗೆ ಜುಲೈ 2017ರಂದು ಆಜಾದಿ ಮೆರವಣಿಗೆ ನಡೆಸಲಾಗಿತ್ತು. ಪ್ರಕರಣದಲ್ಲಿ ಒಟ್ಟು 12 ಆರೋಪಿಗಳಿದ್ದರು. ಒಬ್ಬರು ಸಾವನ್ನಪ್ಪಿದ್ದಾರೆ, ಇನ್ನೊಬ್ಬರು ತಲೆ ಮರೆಸಿಕೊಂಡಿದ್ದಾರೆ.

# ಬಿಹಾರದಲ್ಲಿ 'ಜನ್ ಸುರಾಜ್' ವೇದಿಕೆ ಆರಂಭಿಸಿದ ಕಿಶೋರ್

ಪಾಟ್ನಾ, ಮೇ 5 – ಬಿಹಾರದಲ್ಲಿ ಬದಲಾವಣೆ ತರುವ ಸಲುವಾಗಿ ಸಮಾನ ಮನಸ್ಕರ 'ಜನ್ ಸುರಾಜ್' ವೇದಿಕೆ ಸ್ಥಾಪಿಸುವುದಾಗಿ ಚುನಾವಣಾ ಪರಿಣಿತ ಪ್ರಶಾಂತ್ ಕಿಶೋರ್ ಹೇಳಿದ್ದಾರೆ.

ಹೊಸ ಪಕ್ಷ ಸ್ಥಾಪಿಸುವುದಿಲ್ಲ ಎಂದಿರುವ ಕಿಶೋರ್, ಮುಂದಿನ ದಿನಗಳಲ್ಲಿ ಜನ ಸುರಾಜ್ ವೇದಿಕೆ ರಾಜಕೀಯ ಪಕ್ಷವಾಗಿ ರೂಪಾಂತರವಾಗುವ ಸಾಧ್ಯತೆಯನ್ನು ತಳ್ಳಿ ಹಾಕಿಲ್ಲ.

ಬಿಹಾರದ ಕುರಿತ ತಮ್ಮ ದೃಷ್ಟಿಕೋನವನ್ನು ಒಪ್ಪುವ 18 ಸಾವಿರ ಜನರ ಸಂಪರ್ಕದಲ್ಲಿದ್ದೇನೆ. ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಲು ಗಾಂಧಿ ಜಯಂತಿಯಾದ ಅಕ್ಟೋಬರ್ 2ರಿಂದ ಪಾದಯಾತ್ರೆ ನಡೆಸಲಾಗುವುದು. 3 ಸಾವಿರ ಕಿ.ಮೀ.ಗಳ ಪಾದಯಾತ್ರೆ ನಡೆಸುತ್ತೇನೆ ಎಂದು ಹೇಳಿದ್ದಾರೆ.

ಪ್ರಶಾಂತ್ ಕಿಶೋರ್ ಅವರು ರಾಜಕೀಯ ಸಲಹಾ ಸಂಸ್ಥೆಯಾದ ಐ.ಪಿ.ಎ.ಸಿ. ಸ್ಥಾಪಿಸಿದ್ದಾರೆ. ಈ ಸಂಸ್ಥೆಯು ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಅವರ ವಿರೋಧಿ ಲಾಲು ಪ್ರಸಾದ್ ಪರವಾಗಿ ಈ ಹಿಂದೆ ಕಾರ್ಯ ನಿರ್ವಹಿಸಿತ್ತು.

# ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ಕನ್ನಡ ಬೆಳೆಸಿ

## ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿ ಹರಪನಹಳ್ಳಿ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್ ಕರೆ



ಹರಪನಹಳ್ಳಿ, ಮೇ 5 - ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಕನ್ನಡ ಭಾಷೆಯನ್ನು ಬೆಳೆಸಬೇಕು. ಕನ್ನಡ ಕೇವಲ ಸಂಗೀತ, ಸಾಂಸ್ಕೃತಿಕ ಹಾಗೂ ಸಮ್ಮೇಳನ ದಂತಹ ಕಾರ್ಯಕ್ರಮಗಳಿಗೆ ಸೀಮಿತವಾಗ ಬಾರದು ಎಂದು ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್ ಹೇಳಿದರು.

ಪಟ್ಟಣದ ತೆಗ್ಗಿನಮಠ ಸಂಸ್ಥೆಯ ಕಟ್ಟಿ ಸೇತುರಾಮಚಾರ್ಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಏರ್ಪಡಿಸಲಾಗಿದ್ದ ಕನ್ನಡ ಸಾಹಿತ್ಯ ಪರಿಷತ್‌ನ 108ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಸರ್ವತೋಮುಖವಾಗಿ ಕನ್ನಡವನ್ನು ಬೆಳೆಸಬೇಕಾಗಿದೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವ ಹಾಗೆ ಪೋಷಕರು ತಮ್ಮ ಮಕ್ಕಳಲ್ಲಿ ಕನ್ನಡ ಭಾಷೆಯ ಜ್ಞಾನವನ್ನು ಬೆಳೆಸಬೇಕಾಗಿದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ ಮಾತನಾಡಿ, ಜಾಗತೀಕರಣದ ಪ್ರಭಾವದಿಂದ ಅನೇಕ ಭಾಷೆಗಳು, ಕನ್ನಡ ಶಾಲೆಗಳು ಮುಚ್ಚುವ ಅಪಾಯ ಎದುರಾಗಿದ್ದು, ಈ ನಿಟ್ಟಿನಲ್ಲಿ ನಮ್ಮ ಭಾಷೆ, ನೆಲ, ಜಲ ಪ್ರೀತಿಸಿ ಅವುಗಳನ್ನು ಉಳಿಸಲು ಪ್ರತಿಯೊಬ್ಬರು ಮುಂದಾಗಬೇಕು ಎಂದು ಹೇಳಿದರು.

ಕನ್ನಡ ಮನಸ್ಸುಗಳ ಮೇಲೆ ಕನ್ನಡ ಸಾಹಿತ್ಯ ಪರಿಷತ್ತು ಬೀರಿದ ಪ್ರಭಾವ ಕುರಿತು ಪ್ರೊ. ಹೆಚ್.ಕೊಟ್ರೇಶ್ ಹಾಗೂ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಟಿ.ಎಂ. ರಾಜಶೇಖರ್ ಮಾತನಾಡಿ, ಕನ್ನಡಕ್ಕೆ ತನ್ನದೇ ಆದ ಇತಿಹಾಸವಿದ್ದು ಸಾಹಿತ್ಯ, ಸಾಂಸ್ಕೃತಿಕ, ಉಡುಗೆ, ತೊಡುಗೆಯಲ್ಲಿ ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿದೆ. ಭಾರತೀಯ ಮೂಲನಿವಾಸಿ ದ್ರಾವಿಡರಾದ ನಾವುಗಳು ಭಾಷೆ, ನಾಡು, ನುಡಿ ಸಂಸ್ಕೃತಿಯ ಬಗ್ಗೆ ಅಪಾರವಾದ ಅಭಿಮಾನ ಹೊಂದಿದ್ದೇವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚಂಗೆಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾತೃಬಾಷೆ ತಾಯಿಯ ತೊದಲು ನುಡಿ ಕನ್ನಡ ಭಾಷೆ ಮಾತನಾಡುತ್ತೇವೆ. ಕನ್ನಡದ ಬಗ್ಗೆ ನಮಗೆ ಗೌರವ, ಪ್ರೀತಿ, ಅಭಿಮಾನವಿರಬೇಕು. ಇತರೆ ಭಾಷೆಗಳನ್ನು ಕಲಿತು ಜಾಣರಾಗಬೇಕು. ಸರ್ಕಾರಿ ಉದ್ಯೋಗ ಸೇರಿದಂತೆ ವಿವಿಧ ರಂಗಗಳಲ್ಲಿ ಕನ್ನಡಿಗರಿಗೆ ಮೊದಲ ಆದ್ಯತೆ ನೀಡಬೇಕು. ಮಕ್ಕಳು ದಿನಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕಗಳನ್ನು ಮತ್ತು ಈ ಬಾರಿಯ ಎಸ್ಸೆಸ್ಸೆಲ್ಸಿಯಲ್ಲಿ 100ಕ್ಕೆ 100 ರಷ್ಟು ಫಲಿತಾಂಶ ಬರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಟಿಎಂಎಇ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ.ಚಂದ್ರಶೇಖರಯ್ಯ ಪ್ರಗತಿ ಪರ ಕೃಷಿಕ ಆಲದಹಳ್ಳಿ ಷಣ್ಮುಖಪ್ಪ, ಸಾಹಿತಿ ಕೆ.ಎಸ್. ವೀರಭದ್ರಪ್ಪ ಸನ್ಮಾನ ಸ್ವೀಕರಿಸಿ ಮಾತನಾಡಿ, ಸರ್ಕಾರಿ ಉದ್ಯೋಗಗಳನ್ನು ನಂಬಿ ಜೀವನ ವ್ಯರ್ಥ ಮಾಡಿಕೊಳ್ಳುವ ಬದಲು, ಆಧುನಿಕ ಕೃಷಿ ವ್ಯವಹಾರ ಸೇರಿದಂತೆ, ಅನೇಕ ವೈಯಕ್ತಿಕ ವ್ಯವಹಾರ ಮಾಡಿ ಜೀವನ ರೂಪಿಸಿಕೊಳ್ಳುವ ಮೂಲಕ ಕನ್ನಡ ಭಾಷೆಯನ್ನು ಉಳಿಸಿ, ಬೆಳಸುವ ಅಗತ್ಯತೆ ಇದೆ ಎಂದರು.

ಈ ಸಂದರ್ಭದಲ್ಲಿ ಕಸಾಪ ಗೌರವ ಕಾರ್ಯದರ್ಶಿಗಳಾದ ಆರ್.ಪದ್ಮರಾಜ್ ಜೈನ್, ಜಿ. ಮಹಾದೇವಪ್ಪ, ಕಾರ್ಯಕಾರಿ ಮಂಡಳಿಯ ನಿರ್ದೇಶಕರುಗಳಾದ ಪಿ. ಕರಿಬಸಪ್ಪ, ಎಸ್.ಮಕ್ಬೂಲ್ ಭಾಷ, ಬಿ.ಎಂ. ನಾಗರಾಜ, ಮುಖಂಡರುಗಳಾದ ಬಸವರಾಜ ಭಂಡಾರಿ, ಇಸ್ಮಾಯಿಲ್ ಎಲಿಗಾರ್, ಉಪನ್ಯಾಸಕರುಗಳಾದ ಟಿ. ಹೆಚ್. ಗಿರೀಶ್, ಸಂತೋಷ್, ಕೆ.ಎಂ.ಲತಾ ಉಪಸ್ಥಿತರಿದ್ದರು.

# ಅಕ್ಷರ ಅಲಂಕಾರಕ್ಕೆ ಚಿತ್ರಕಲೆ ಭದ್ರವಾದ ಬುನಾದಿ

## 'ನಾ ಕಂಡಂತೆ ಬಸವಣ್ಣ' ಚಿತ್ರ ಬರೆಯುವ ಸ್ಪರ್ಧೆ ಸಮಾರಂಭದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ

ದಾವಣಗೆರೆ, ಮೇ 5- ಚಿತ್ರ ಬರೆಯುವ ಹವ್ಯಾಸವನ್ನು ಮಕ್ಕಳು ಬಾಲ್ಯದಿಂದಲೇ ರೂಢಿಸಿಕೊಂಡರೆ ಅಕ್ಷರ ಅಲಂಕಾರಕ್ಕೆ ಭದ್ರವಾದ ಬುನಾದಿಯಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಹಂತದಲ್ಲೇ ಚಿತ್ರಕಲೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ನುಡಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ವಿರಕ್ತ ಮಠ ಹಾಗೂ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ 110ನೇ ವರ್ಷದ ಶ್ರೀ ಬಸವ ಜಯಂತ್ಯೋತ್ಸವದ ಅಂಗವಾಗಿ ನಗರದ ಶ್ರೀ ಶಿವಯೋಗ ಮಂದಿರದ ಒಳಾಂಗಣದಲ್ಲಿ ಮೊನ್ನೆ ಹಮ್ಮಿಕೊಳ್ಳಲಾಗಿದ್ದ 'ನಾ ಕಂಡಂತೆ ಬಸವಣ್ಣ' ಚಿತ್ರ ಬರೆಯುವ ಸ್ಪರ್ಧೆಯ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು. ಚಿತ್ರ ಬರೆಯುವ ಮೂಲಕ ಉದ್ಘಾಟನೆ ಮಾಡಿದ ಹಿರಿಯ ಚಿತ್ರ ಕಲಾವಿದ ಎ.ಮಹಾಲಿಂಗಪ್ಪ ಮಾತನಾಡಿ, ಜೀವನದಲ್ಲಿ ವಿವಿಧ ಹಂತಗಳಲ್ಲಿ ಏನನ್ನಾದರೂ ಸಾಧನೆ ಮಾಡಬೇಕೆಂದರೆ ಅದು ಚಿಕ್ಕ ವಯಸ್ಸಿನಿಂದಲೇ ಶತಪ್ರಯತ್ನ ಮಾಡಬೇಕು ಎಂದರು.



ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿ, ವ್ಯಕ್ತಿಗಳ ವ್ಯಕ್ತಿತ್ವದ ವಿಕಸನಕ್ಕೆ ಸಾಂಸ್ಕೃತಿಕ, ಕಲಾ ಪ್ರಕಾರಗಳ ಚಟುವಟಿಕೆಗಳು ಜೀವನದ ಉತ್ಸಾಹಕ್ಕೆ ಸ್ಫೂರ್ತಿಯಾಗುತ್ತವೆ ಎಂದು ಹೇಳಿದರು.

ಕಲಾಕುಂಚದ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ, ಗೌರವ ಅಧ್ಯಕ್ಷರಾದ ಶ್ರೀಮತಿ ವಸಂತಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬಿ. ಜಿ.ಲೋಕೇಶ್, ಸಂಚಾಲಕ ಬೇಳೂರು ಸಂತೋಷ್‌ಕುಮಾರ್ ಶೆಟ್ಟಿ, ಚನ್ನಬಸವ ಶೀಲವಂತ್ ಮುಂತಾದವರು ಉಪಸ್ಥಿತರಿದ್ದರು. ಬಾಲಪ್ರತಿಭೆ ಕು. ನಿಹಾರಿಕಾ ಪ್ರಾರ್ಥನೆ ಮಾಡಿದರು.

**ಫಲಿತಾಂಶ:** ವಯಸ್ಸಿಗೆ ಅನುಗುಣವಾಗಿ ಮೂರು ವಿಭಾಗಗಳಾಗಿ ವಿಂಗಡಿಸಿದ್ದು, ಪ್ರಾಥಮಿಕ ವಿಭಾಗ ಪ್ರಥಮ ಬಹುಮಾನ ಆದ್ಯಾ ಬಿ.ಎಸ್., ದ್ವಿತೀಯ ನಿಹಾರಿಕಾ ಹೆಚ್.ಎನ್., ತೃತೀಯ ನಮ್ರತಾ ಎಂ.ಎಂ. ಸಮಾಧಾನಕರ ಬಹುಮಾನ ಸಮರ್ಥ ಎನ್.ಆರ್., ಪ್ರೌಢ ವಿಭಾಗ ಪ್ರಥಮ ಮಾಲತೇಶ ಜಿ.ಟಿ. ದ್ವಿತೀಯ, ಮೇಘರಾಜ ಕೆ.ಎಸ್. ತೃತೀಯ, ಕಿರಣ್ ಯಾದವ್ ಎನ್.ವಿ. ಸಮಾಧಾನಕರ ಬಹುಮಾನ ಅಪೂರ್ವ ವಿ., ಪ್ರೇರಣಾ ಎಂ.ಎನ್. ಕಾರ್ತಿಕ್ ಬಿ.ಎರೇಸೀಮೆ, ಪವನ್ ಎನ್.ವೈ.

ಹಿರಿಯ ವಿಭಾಗ ಪ್ರಥಮ ನವೀನ್ ಹೆಚ್. ಎಂ., ದ್ವಿತೀಯ ಮುರಳೀಕೃಷ್ಣ ತೃತೀಯ ಶಿವಾನಂದಪ್ಪ ಮುರಿಗೆಪ್ಪ ಸಮಾಧಾನಕರ ಬಹುಮಾನ ಚೇತನ್ ಎಸ್.ಜಿ., ಜೆ.ಶೋಭಾ ಪಡೆದರು.

# ರಾಜಧಾನಿಯಾಗಿದ್ದರೆ ನಾಡು ಸುಭಿಕ್ಷ

(1ನೇ ಪುಟದಿಂದ) ಬೇಕು ಎಂಬ ದೂರದೃಷ್ಟಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಸಾಪ ಸ್ಥಾಪಿಸಿದರು. ಕೆಆರ್‌ಎಸ್ ಜಲಾಶಯ ನಿರ್ಮಾಣವೂ ಸಹ ಮಹಾರಾಜರ ದೂರದೃಷ್ಟಿಯ ಫಲವಾಗಿತ್ತು. ಹಣದ ಕೊರತೆಯಾದಾಗ ಆಭರಣ ಮಾರಿ ಅಣೆಕಟ್ಟು ಕಟ್ಟಿ ಜನಪರ ಕೆಲಸ ಮಾಡಿದ್ದರು. ಇಂದು ಅದರ ಫಲವನ್ನು ನಾವು ಕಾಣುತ್ತಿದ್ದೇವೆ. ಬೇಂದ್ರೆ, ಕುವೆಂಪು ಅವರಂತಹ ಕವಿ, ಸಾಹಿತಿಗಳು ಉದಾತ್ತ ಮನಸ್ಸಿನಿಂದ ಭಾಷೆ, ನಾಡು ಉಳಿಸಿ, ಬೆಳೆಸಿದ್ದಾರೆ ಎಂದು ಸ್ಮರಿಸಿದರು.

ದೂಡಾದಲ್ಲಿ ಸಂಘ-ಸಂಸ್ಥೆಗಳಿಗೆ ನೀಡಬಹುದಾದ ಸಾಕಷ್ಟು ಸಿಎ ನಿವೇಶನಗಳಿದ್ದು, ಕನ್ನಡ ಸಾಹಿತ್ಯ ಪರಿಷತ್ ತನ್ನ ಕಾರ್ಯಚಟುವಟಿಕೆಗಳಿಗಾಗಿ ಅಗತ್ಯವಾದರೆ ಅರ್ಜಿ ಸಲ್ಲಿಸಿದಲ್ಲಿ ಎರಡು ತಿಂಗಳಲ್ಲಿ ನಿವೇಶನ ಮಂಜೂರು ಮಾಡುವುದಾಗಿ ಹೇಳಿದರು.

ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮಾತನಾಡುತ್ತಾ, ಪೋಷಕರಲ್ಲಿ ಆಂಗ್ಲಭಾಷಾ ವ್ಯಾಮೋಹ ಹೆಚ್ಚಾಗುತ್ತಿದೆ. ಮಕ್ಕಳನ್ನು ಆಂಗ್ಲ ಭಾಷಾ ಮಾಧ್ಯಮ ಶಾಲೆಗಳಿಗೆ ಸೇರಿಸುತ್ತಿರುವುದರಿಂದ ಹಲವಾರು ಕನ್ನಡ ಪದಗಳ ಅರ್ಥವೇ ತಿಳಿಯದಾಗಿದ್ದಾರೆ. ಇಂಗ್ಲಿಷ್ ಭಾಷೆ ಜೊತೆ ಕನ್ನಡವನ್ನೂ ಹೇಳಿ ಕೊಡುವ ಮೂಲಕ ಕನ್ನಡ ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಒಂದು ಸಂಸ್ಥೆ ಸ್ಥಾಪನೆಯಾಗಿ ಇಷ್ಟು ವರ್ಷಗಳು ಸೇವೆ ಸಲ್ಲಿಸುತ್ತಿರುವುದು ಸಾಮಾನ್ಯ ಮಾತಲ್ಲ. ಕನ್ನಡ ಮನಸ್ಸುಗಳನ್ನು ಒಂದುಗೂಡಿಸಬೇಕೆಂಬ ದೂರದೃಷ್ಟಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್. ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅವರು ಸ್ಥಾಪಿಸಿದ ಕಸಾಪ ಇಂದು ಬೃಹದಾಕಾರವಾಗಿ ಬೆಳೆದಿದೆ. ಕಸಾಪದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ಇರುವುದರಿಂದ ಜನರಿಗೆ ಹತ್ತಿರವಾಗಲು ಸಾಧ್ಯವಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡುತ್ತಾ, ಸಾಹಿತ್ಯ ಪರಿಷತ್ ಆರಂಭಿಸಿ, ನಾಡಿನಾದ್ಯಂತ ಉತ್ತಮ ಚಟುವಟಿಕೆಗಳನ್ನು ನಡೆಯುವಂತೆ ಮಾಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು 'ಪರಿವರ್ತಕ' ಎಂದೇ ಕರೆಯಬಹುದು. ಜಗತ್ತಿನಲ್ಲಿನ ಎಲ್ಲಾ ಭಾಷೆಗಳಿಗಿಂತಲೂ ಸುಂದರವಾದ, ಐತಿಹಾಸಿಕ ನೆಲೆಯುಳ್ಳ ಭಾಷೆ ಕನ್ನಡ. ಇಂತಹ ನಾಡಿನಲ್ಲಿ ಜನಿಸಿದ ನಾವೇ ಧನ್ಯರು ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ ವೇದಿಕೆ ಮೇಲಿದ್ದರು.

ಕಸಾಪ ಗೌರವ ಕಾರ್ಯದರ್ಶಿ ಬಿ.ದಿಳ್ಳೆಪ್ಪ ಸ್ವಾಗತಿಸಿದರು. ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಕಾರ್ಯಕ್ರಮ ನಿರೂಪಿಸಿದರು. ಜಗದೀಶ್ ಕೂಲಂಬಿ ಅತಿಥಿಗಳನ್ನು ಪರಿಚಯಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹೆಚ್.ಬಿ. ಮಂಜುನಾಥ್, ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ಬಂಕಾಪುರ ಚನ್ನಬಸಪ್ಪ, ನಾಗೇಂದ್ರ ಬಂಡೀಕರ್, ಸತ್ಯಭಾಮ, ರುದ್ರಾಕ್ಷಿಬಾಯಿ ಹಾಗು ಇತರರು ಇದ್ದರು.

# ಗ್ರಾಮೀಣ ಮಕ್ಕಳಿಗೆ ಉನ್ನತ ಶಿಕ್ಷಣ ಸುಲಭವಾಗಿ ಸಿಗುವಂತಾಗಬೇಕು



### ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶಯ

ಮಲೇಬೆನ್ನೂರು, ಮೇ 5- ಹಲವಾರು ವರ್ಷಗಳಿಂದ ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದರು. ಇದರ ಪರಿಣಾಮ ಗ್ರಾಮೀಣ ಪ್ರದೇಶದವರಿಗೆ ಉನ್ನತ ಸ್ಥಾನ ಸಿಕ್ಕಿಲ್ಲ ಎಂದು ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಜಿಗಳಿ ಗ್ರಾಮದಲ್ಲಿ ಶ್ರೀ ಗುರುಧ್ಯಾನ, ನವೋದಯ, ಮೊರಾರ್ಜಿ ಮತ್ತು ಸೈನಿಕ ಶಾಲೆಗಳ ತರಬೇತಿ ಕೇಂದ್ರದ ನೂತನ ಕಟ್ಟಡವನ್ನು ಉದ್ಘಾಟಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಹಣವಂತರ, ಉಳ್ಳವರ ಪಾಲಾಗಿದ್ದ ಶಿಕ್ಷಣ ಕ್ಷೇತ್ರ ಇಂದು ಎಲ್ಲರ ಕೈಗೆ ಸುಲಭವಾಗಿ ಸಿಗುವಂತೆ ಆಗಿರುವುದು ಸಂತೋಷದ ವಿಷಯವಾಗಿದ್ದರೂ ಗ್ರಾಮೀಣ ಪ್ರದೇಶದವರು ನಗರ ಪ್ರದೇಶದ ಮಕ್ಕಳಿಗೆ ಪೈಪೋಟಿ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ತರಬೇತಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಬೇಕು. ಐಎಎಸ್, ಐಎಫ್‌ಎಸ್ ತರಬೇತಿ ಪಡೆಯಲು ಗ್ರಾಮೀಣ ಪ್ರದೇಶದಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಮುಂದಾಗಬೇಕೆಂದು ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಒತ್ತಾಯಿಸಿದರು.

ಹಣ ಇದ್ದವರು ತಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂದು ಲಕ್ಷ ಲಕ್ಷ ಖರ್ಚು ಮಾಡಿ ಖಾಸಗಿ ವಸತಿ ಶಾಲೆಗೆ ಸೇರಿಸುತ್ತಾರೆ. ಆದರೆ ಅಲ್ಲಿ ಅವರಿಗೆ ಹೆಚ್ಚು ಅಂಕ ಪಡೆಯುವ ಶಿಕ್ಷಣ ಮಾತ್ರ ಕಲಿಸಲಾಗುತ್ತದೆ. ಅದೇ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣ, ಸಂಸ್ಕಾರ, ಸಂಸ್ಕೃತಿ, ಪ್ರಾಮಾಣಿಕತೆಯ ಬಗ್ಗೆಯೂ ಕಲಿಸಲಾಗುತ್ತಿದೆ ಎಂದು ಸ್ವಾಮೀಜಿ ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಗ್ರಾಮೀಣ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕೆಂಬ ಹಂಬಲದಿಂದ ಹಳ್ಳಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಡ ನಿರ್ಮಿಸಿ ಕೋಚಿಂಗ್ ನೀಡಲು ಮುಂದಾಗಿರುವ ಎಂ.ಕೆ. ಸ್ವಾಮಿ ಅವರನ್ನು ಅಭಿನಂದಿಸಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಗ್ರಾಮದ ಟಿ. ಚಂದ್ರಶೇಖರಪ್ಪ, ದಾವಣಗೆರೆ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಹಿಂಡಸಘಟ್ಟೆಯ ಪಿ.ಬಿ. ನಾಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಮಾತನಾಡಿದರು.

ಗ್ರಾಮದ ಮುಖಂಡ ಗೌಡ್ರ ಬಸವರಾಜಪ್ಪ, ಗ್ರಾ.ಪಂ. ಸದಸ್ಯರಾದ ಕೆ.ಜಿ. ಬಸವರಾಜ್, ಜಿ. ಬೇವಿನಹಳ್ಳಿಯ ಆನಂದಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಹರಿಹರ ತಾಲ್ಲೂಕು ಗಾಮಾಂತರ ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಹಿಂಡಸಘಟ್ಟೆಯ ಮೃತ್ಯುಂಜಯ, ಸಿಡಿಓ ಆರ್. ರಮೇಶ್, ಮಕ್ಕಳ ತಜ್ಞ ನಂದ್ಯಪ್ಪ, ಕೆ.ಎಂ. ರಾಮಪ್ಪ, ಎಂ.ಬಿ. ಜಗದೀಶ್, ಉಪನ್ಯಾಸಕರಾದ ಉಮಾ ಬಣಕಾರ್, ತಿಪ್ಪಣ್ಣ ಕಬ್ಬೂರು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಸಂಸ್ಥಾಪಕ ಎಂ. ಹಾಲಯ್ಯ ಅಧ್ಯಕ್ಷತೆ ವಹಿಸಿದ್ದರು. ಎಂ.ಕೆ. ಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಸಾನವಿ ಸ್ವಾಮಿ ವಂದಿಸಿದರು.

# ಇಂದಿನಿಂದ ನಗರದಲ್ಲಿ ಪೊಲೀಸ್ ನೇಮಕಾತಿ ಪರೀಕ್ಷೆ

ಪೊಲೀಸ್ ನೇಮಕಾತಿಯ ದೇಹದಾರ್ಢ್ಯತೆ ಪರೀಕ್ಷೆಗೆ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದೆ ಸ್ಪೆಷಲ್ ಆರ್‌ಎಸ್‌ಐ (ಕೆಎಸ್‌ಆರ್‌ಪಿ) ಮತ್ತು ಐಆರ್‌ಬಿ (ಮಹಿಳಾ ಮತ್ತು ಪುರುಷ) (ಸೇವಾ ನಿರತ) (ಕಲ್ಯಾಣ ಕರ್ನಾಟಕ/ ಕ.ಕಲ್ಯಾಣೇತರ) ಹುದ್ದೆಗಳ ನೇಮಕಾತಿ ಸಂಬಂಧ ಅಭ್ಯರ್ಥಿಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳನ್ನು ಇಂದಿನಿಂದ ಇದೇ ದಿನಾಂಕ 12 ರ ವರಗೆ ಒಟ್ಟು 6 ದಿನಗಳ ಕಾಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವುದು.

ಎಲ್ಲಾ ಅಭ್ಯರ್ಥಿಗಳು ಇಟಿ ಮತ್ತು ಪಿಎಸ್‌ಟಿ ಪ್ರವೇಶ ಪತ್ರವನ್ನು ಇಲಾಖೆಯ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಂಡು ಬೆಳಿಗ್ಗೆ 6 ಗಂಟೆಗೆ ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಜರಾಗುವಂತೆ ಪ್ರಭಾರ ಪೊಲೀಸ್ ಮಹಾ ನಿರೀಕ್ಷಕರು ಪೂರ್ವ ವಲಯ ಡಾ. ಕೆ ತ್ಯಾಗರಾಜನ್ ತಿಳಿಸಿದ್ದಾರೆ.

# ಕೌಲಂದೆ ಛೋಟಾ ಪಾಕಿಸ್ತಾನ್ : ವರದಿ ಕೇಳಿದ ಮುಖ್ಯಮಂತ್ರಿ

ಬೆಂಗಳೂರು, ಮೇ 5 – ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಕೌಲಂದೆ ಗ್ರಾಮವನ್ನು 'ಛೋಟಾ ಪಾಕಿಸ್ತಾನ್' ಎಂದು ಬಣ್ಣಿಸಿದ ವಿಡಿಯೋ ಕುರಿತು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈದ್ - ಉಲ್ - ಫಿತರ್ ವೇಳೆ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು ರಸ್ತೆ ಬದಿಯಲ್ಲಿ ಸೇರಿದ್ದರು. ಅವರು 'ನಾರಾ ಎ ತಕ್ಬೀರ್ ಅಲ್ಲಾಹು ಅಕ್ಬರ್' ಎಂದು ಘೋಷಣೆ ಕೂಗುತ್ತಿದ್ದರು. ಆಗ ಪೊಲೀಸರು ಹಾಗೂ ಇತರೆ ಕೆಲವರು ಗುಂಪು ಚೆದುರುವಂತೆ ತಿಳಿಸಿದ್ದು ಕಂಡು ಬಂದಿದೆ.

ನಂತರದಲ್ಲಿ ವಿಡಿಯೋ ಮಾಡುತ್ತಿದ್ದ ವ್ಯಕ್ತಿಯೋರ್ವ ' ಯೇ ಭಿ ಪಾಕಿಸ್ತಾನ್ ಹೈ, ಛೋಟಾ' (ಇದೂ ಸಹ ಸಣ್ಣ ಪಾಕಿಸ್ತಾನ) ಎಂದು ಹೇಳಿದ್ದು ವಿಡಿಯೋದಲ್ಲಿದೆ. ಇನ್ನೋರ್ವ ವ್ಯಕ್ತಿ 'ಕೌಲಂದೆ ಬೋಲೆ ತೋ ಛೋಟಾ ಪಾಕಿಸ್ತಾನ್, ಠೀಕ್ ಹೈ' (ಕೌಲಂದೆ ಎಂದರೆ ಸಣ್ಣ ಪಾಕಿಸ್ತಾನ ಎಂಬುದು ನಿಜ) ಎಂದಿದ್ದಾನೆ.

# ಮಲೇಬೆನ್ನೂರಿನಲ್ಲಿ ಆಂಜನೇಯ ಸ್ವಾಮಿ ಉಚ್ಛಾಯ



ಮಲೇಬೆನ್ನೂರು, ಮೇ 5- ಇಲ್ಲಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬಸವ ಜಯಂತಿ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿರುವ ಸಾಮೂಹಿಕ ವಿವಾಹದ ಅಂಗವಾಗಿ ಪಟ್ಟಣದಲ್ಲಿ ಆಂಜನೇಯ ಸ್ವಾಮಿಯ ಉಚ್ಛಾಯ ಸಂಭ್ರಮದಿಂದ ಜರುಗಿತು.

# ನಬಾರ್ಡ್ ಸಹಯೋಗದಲ್ಲಿ ತರಬೇತಿ ಶಿಬಿರ



ದಾವಣಗೆರೆ,ಮೇ.5- ನಗರದ ಐಸಿಎಆರ್–ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ, ಪಬ್ಲಿಕ್ ಅಫೇರ್ಸ್ ಫೌಂಡೇಶನ್ ಬೆಂಗಳೂರು ಸಂಸ್ಥೆಯು ನಬಾರ್ಡ್ ಸಂಸ್ಥೆಯ ಸಹಯೋಗದಲ್ಲಿ ಮೊಬೈಲ್ ಆಧಾರಿತ ಅಪ್ಲಿಕೇಶನ್‌ಗಳು, ನಾವೀನ್ಯತೆಗಳು, ಸ್ಮಾರ್ಟ್ ಕೃಷಿ ಪದ್ದತಿ ಮತ್ತು ಅಸ್ತಿತ್ವದಲ್ಲಿರುವ ಪರಿವರ್ತಕ ಕೃಷಿ ತಂತ್ರಜ್ಞಾನ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

# ಉನ್ನತ ಶಿಕ್ಷಣ ಸಂಸ್ಥೆಗಳಿಂದ ಆನ್‌ಲೈನ್ ಕಲಿಕೆಗೆ ಚಾಲನೆ

ನವದೆಹಲಿ, ಮೇ 5 – ಐ.ಐ.ಎಸ್.ಸಿ. ಬೆಂಗಳೂರು ಹಾಗೂ ಐ.ಐ.ಐ.ಟಿ. ಬೆಂಗಳೂರು ಸೇರಿದಂತೆ ಉನ್ನತ ಶಿಕ್ಷಣ ಸಂಸ್ಥೆಗಳು ಉದ್ಯೋಗಕ್ಕೆ ಸಿದ್ಧಪಡಿಸುವ ಪರಿಣಿತ ಕಲಿಕೆಗಾಗಿ ಆನ್‌ಲೈನ್ ಕಲಿಕಾ ವೇದಿಕೆಯಾದ ಕೌರ್ಸೆರಾ ಜೊತೆ ಕೈ ಜೋಡಿಸಿವೆ. ಐ.ಐ.ಟಿ.ಯ ಎಕ್ಸಿಕ್ಯೂಟಿವ್ ಎಂ.ಬಿ.ಎ., ಐ.ಐ.ಐ.ಟಿ. ಬೆಂಗಳೂರಿನ ಡಾಟಾ ಸೈನ್ಸ್ ಎಂ.ಎಸ್.ಸಿ. ಸೇರಿದಂತೆ ಹಲವಾರು ಕೋರ್ಸ್‌ಗಳಿಗೆ ಕೈ ಜೋಡಿಸಲಾಗಿದೆ ಎಂದು ಕೋರ್ಸೆರಾ ತಿಳಿಸಿದೆ.

ಆನ್‌ಲೈನ್ ಕಲಿಕೆ ಈಗ ಹೆಚ್ಚು ಒಳಗೊಳ್ಳುವಿಕೆ ಹಾಗೂ ಕಡಿಮೆ ವೆಚ್ಚದ ಶಿಕ್ಷಣ ಮಾದರಿಯಾಗಿದೆ ಎಂದು ಕೋರ್ಸೆರಾದ ಅಧಿಕಾರಿ ಬೆಟ್ಟಿ ವಂಡೆನ್‌ಬಾಶ್ಚ್ ಹೇಳಿದ್ದಾರೆ.

# ಸಿದ್ಧಗಂಗಾ ಶಿವಣ್ಣ ಸ್ಮರಣಾರ್ಥ ಸ್ಪರ್ಧೆಗಳು





ದಾವಣಗೆರೆ, ಮೇ 5- ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ವತಿಯಿಂದ ವಿವಿಧ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳು ಕಳೆದ ಕಳೆದ ವಾರ ನಡೆದವು.

ಶಿಕ್ಷಣ ಶಿಲ್ಪಿ ಎಂ.ಎಸ್.ಶಿವಣ್ಣನವರ ಸ್ಮಾರಕ ಸ್ಥಳ ಆನಗೋಡಿನ ಸಿದ್ಧಗಂಗೋತ್ರಿಯಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಾಲಿಬಾಲ್, ಥ್ರೋಬಾಲ್, ಕಬಡ್ಡಿ, ಖೋ-ಖೋ, ಕ್ರಿಕೆಟ್ ಪಂದ್ಯಾವಳಿಗಳು ನಡೆದವು.

ಸಾಂಸ್ಕೃತಿಕ ಸ್ಪರ್ಧೆಗಳು ಜಾನಪದ ನೃತ್ಯ, ಮೂಕಾಭಿನಯ. ಸಾಮೂಹಿಕ ಗೀತೆ, ಮ್ಯಾಡ್ ಆಡ್ಸ್‌ಗಳಲ್ಲಿ ನಡೆಯಿತು. ಸಿದ್ದಗಂಗಾ ವಿದ್ಯಾ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿ'ಸೌಜ ಧ್ವಜಾರೋಹಣ ನೆರವೇರಿಸಿದರು. ದೈಹಿಕ ಶಿಕ್ಷಕರಾದ ರಘು, ಲಿಂಗರಾಜು, ಶ್ರೀನಿವಾಸ್, ಸಾಮ್ಯಾನಾಯ್ಕ, ಆರೋಗ್ಯಮ್ಮ, ಸುನೀತ, ಮಾಧುರಿ ಇವರ ನೇತೃತ್ವದಲ್ಲಿ ಕ್ರೀಡಾ ಜ್ಯೋತಿ ಬೆಳಗಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಜಿ.ಸಿ. ನಿರಂಜನ್ ಮತ್ತು ಎಲ್ಲಾ ಉಪನ್ಯಾಸಕರು ಹಾಜರಿದ್ದರು.

ಎಂ.ಎಸ್.ಶಿವಣ್ಣ ಅವರ ದ್ವಿತೀಯ ವರ್ಷದ ಸ್ಮರಣೆ ಅಂಗವಾಗಿ ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳ ಜವಾಬ್ದಾರಿಯನ್ನು ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಹೇಮಂತ್, ಹಿರಿಯ ವಿದ್ಯಾರ್ಥಿ ಹರ್ಷ, ಮನು ಮತ್ತು ಬೋಧಕೇತರ ಸಿಬ್ಬಂದಿ ನಿರ್ವಹಿಸಿದರು.

# ವಾರಾಂತ್ಯದಲ್ಲೂ ಎಲ್‌ಐಸಿ ಷೇರುಗಳ ಮಾರಾಟ

(1ನೇ ಪುಟದಿಂದ) ವಾರದಂದೂ ಬಿಡ್ಡಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ಸೋಮವಾರ ಐ.ಪಿ.ಓ. ಮುಕ್ತಾಯವಾಗಲಿದೆ. ಎಲ್.ಐ.ಸಿ ಷೇರಿನ ಬೆಲೆಯನ್ನು 902-949 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಚಿಲ್ಲರೆ ಹೂಡಿಕೆದಾರರು ಹಾಗೂ ಉದ್ಯೋಗಿಗಳು 45 ರೂ.ಗಳ ವಿನಾಯಿತಿ ಪಡೆಯಲಿ ದ್ದಾರೆ. ಪಾಲಿಸಿದಾರರಿಗೆ 60 ರೂಗಳ ವಿನಾಯಿತಿ ಇದೆ.

# ಮಹಾಪುರುಷ ಬಸವಣ್ಣನವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು



### ಶಾಸಕ ಎಂ.ಪಿ. ರೇಣುಕಾಚಾರ್ಯ

ಹೊನ್ನಾಳಿ, ಮೇ 5 - ಮಹಾಪುರುಷ ಬಸವಣ್ಣ ನವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಇಲ್ಲಿನ ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡ 889ನೇ ಬಸವೇಶ್ವರ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರ ಬದುಕಿನ ತತ್ವ-ಆದರ್ಶಗಳನ್ನು ನಾವೆಲ್ಲರೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಅದೇ ನಾವು ಅವರಿಗೆ ಸಲ್ಲಿಸಬಹುದಾದ ಬಹು ದೊಡ್ಡ ಗೌರವ. ಆದ್ದರಿಂದ, ನಾವೆಲ್ಲರೂ ಅವರ ಸಮಾಜಮುಖಿ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗುವ ಪಣ ತೊಡೋಣ ಎಂದು ತಿಳಿಸಿದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ಬಸವಣ್ಣನವರ ಕ್ರಾಂತಿಕಾರಿ ವಿಚಾರಧಾರೆಗಳು ಅನನ್ಯ. ಅವುಗಳನ್ನು ಅಂದಿನ ಸಮಾಜ ಅರಗಿಸಿಕೊಳ್ಳಲಾರದ ಕಾರಣ ಪ್ರಸ್ತುತ ನಮ್ಮ ಸಮಕಾಲೀನ ಸಮಾಜದ ಪ್ರಗತಿಯ ವೇಗ ಕೊಂಚ ಕಡಿಮೆಯಾಗಿದೆ. ಬಸವಣ್ಣನವರ ಸಮಾಜಮುಖಿ ಕೆಲಸಗಳಿಗೆ ಇಂಬು ನೀಡುವಂಥ ರಾಜ-ಮಹಾರಾಜರು ಆ ಕಾಲದಲ್ಲಿ ದೊರಕಿದ್ದರೆ, ಬಸವಣ್ಣನವರ ಸಮಾಜ ಸುಧಾರಣಾ ಚಳವಳಿಗೆ ಸಾಟಿಯಾಗುವವರು ಇನ್ನೋರ್ವರು ಇರುತ್ತಿರಲಿಲ್ಲ ಎಂದು ವಿವರಿಸಿದರು.

ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಕೆ. ಕರೇಗೌಡ್ರು, ತಹಸೀಲ್ದಾರ್ ಎಚ್.ಜೆ. ರಶ್ಮಿ, ಉಪ ತಹಸೀಲ್ದಾರ್ ಟಿ. ಸುರೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ. ಕುಮಾರ್, ಪುರಸಭಾ ಸದಸ್ಯ ರಂಗಪ್ಪ ಹಾಗೂ ಇತರರು ಇದ್ದರು.

# ಬಸವಣ್ಣನವರ ಚಿಂತನೆಗಳು ಇಂದಿಗೂ ಪ್ರಸ್ತುತ

## ವಿಜ್ಞಾನ ಪರಿಷತ್ತಿನ ಜಿಲ್ಲಾ ಸಮಿತಿ ಕಾರ್ಯದರ್ಶಿ ಗುರುಸಿದ್ಧ ಸ್ವಾಮಿ ಅಭಿಮತ



ದಾವಣಗೆರೆ, ಮೇ 5- ಹನ್ನೆರಡನೇ ಶತಮಾನದ ಶರಣರ ಕ್ರಾಂತಿ ವಿಶ್ವ ಭೂಪಟದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಅಂಶವಾಗಿದೆ ಹಾಗೂ ಸಮಾಜದ ಕೈಗನ್ನಡಿಯಾಗಿದೆ. ಬಸವಣ್ಣನವರ ಆದರ್ಶಗಳು, ತತ್ವಗಳು, ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ.ಗುರುಸಿದ್ಧಸ್ವಾಮಿ ತಿಳಿಸಿದರು.

ಆವರಗೆರೆಯ ಶ್ರೀ ಕಾಯಕ ಯೋಗಿ ಬಸವ ಪರಿಸರ ವೇದಿಕೆ ಏರ್ಪಡಿಸಿದ್ದ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮ, ಪೌರ ಕಾರ್ಮಿಕರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಶರಣರು ವಚನ ಸಾಹಿತ್ಯದ ಮೂಲಕ ಶ್ರೀ ಬಸವಣ್ಣನವರ ನಾಯಕತ್ವದಲ್ಲಿ ಜಾತಿ ರಹಿತ, ವರ್ಗ ರಹಿತ ಸಮಾಜ ನಿರ್ಮಾಣ ಮಾಡಲು ಶ್ರಮಿಸಿದರು. ಅನುಭವ ಮಂಟಪದ ಮೂಲಕ ಅಕ್ಷರ ಲೋಕದಿಂದ ದೂರ ಇದ್ದ ಜನರನ್ನು, ಅಕ್ಷರಸ್ಥರನ್ನಾಗಿ ಮಾಡಿದರು. ಕುಲ ಕಸುಬುಗಳ ಶ್ರೇಷ್ಠತೆಯನ್ನು ಎತ್ತಿ ಹಿಡಿದು, ಮಾನವ ಕುಲ ಒಂದೇ ಎಂದು ಸಾರಿ ನಾವೆಲ್ಲರೂ ಸಹೋದರರಂತೆ ಬದುಕುವ ದಾರಿ ತೋರಿದರು.

ಶೋಷಿತ ಜನರನ್ನು ಮೇಲಕ್ಕೆತ್ತಿ ಸಮ ಸಮಾಜ ಸ್ಥಾಪಿಸಲು ಸಣ್ಣ ಜಾತಿಗಳಿಗೂ ಪ್ರಾತಿನಿಧ್ಯ ನೀಡಿ, ಗೌರವಿಸಿದ ಕೀರ್ತಿ ಬಸವಾದಿ ಶರಣರಿಗೆ ಸಲ್ಲುತ್ತದೆ. ಬಸವಣ್ಣ ತನ್ನ ಸುತ್ತಲಿನ ಎಲ್ಲಾ ವರ್ಗದ ಜನರನ್ನು ಒಟ್ಟುಗೂಡಿಸಿ ಮೌಢ್ಯ, ಕಂದಾಚಾರ, ಸ್ತ್ರೀ ಶೋಷಣೆಯ ವಿರುದ್ಧ ಧ್ವನಿ ಎತ್ತಿದ ಕ್ರಾಂತಿ ಪುರುಷ. ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಶ್ರೀ ಬಸವೇಶ್ವರ ವಿಜ್ಞಾನ ಪಿ.ಯು ಕಾಲೇಜಿನ ಪ್ರಾಚಾರ್ಯರು ಮಾತನಾಡಿ, ಬಸವಾದಿ ಶರಣರ ನಡೆ-ನುಡಿಗಳು ಒಂದಾಗಿದ್ದು, ಸಮ ಸಮಾಜ ಕಟ್ಟುವ ಕನಸನ್ನು ಹೊತ್ತು, ಅದನ್ನು ಸಾಕಾರಗೊಳಿಸಲು ಬಸವಣ್ಣನವರ ನೇತೃತ್ವದಲ್ಲಿ ಹಗಲಿರುಳು ದುಡಿದು ಯಶಸ್ಸನ್ನು ಕಂಡರು. ಇಂದಿನ ಯುವ ಪೀಳಿಗೆ ವಚನಗಳ ಸಾರ ತಿಳಿದು, ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಶ್ರೀಮತಿ ಜಯ್ಯಮ್ಮ ಗೋಪಿನಾಥ್ ಸಮಾರಂಭವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಸಮಾರಂಭದಲ್ಲಿ 20 ಜನ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಕಾಯಕಯೋಗಿ ಬಸವ ಪರಿಸರ ವೇದಿಕೆ ಅಧ್ಯಕ್ಷ ನಾಯಕನಹಟ್ಟಿ ರುದ್ರಪ್ಪ ವಹಿಸಿದ್ದರು. ಕೆ.ಪಾಪಯ್ಯ ಮತ್ತು ಸಂಗಡಿಗರ ಭಜನಾ ಮಂಡಳಿಯವರು ಪ್ರಾರ್ಥನೆ ನೆರವೇರಿಸಿದರು. ಕೆ.ರಾಜು ಸ್ವಾಗತಿಸಿ, ಕೆ.ಬಾಲಪ್ಪ ನಿರೂಪಿಸಿದರು. ಬಿ.ಮಹಾಂತೇಶ್ ವಂದಿಸಿದರು.

ಶಾಮಿಯಾನ ವೀರೇಶ್, ವ್ಯವಸಾಯ ಪತ್ತಿನ ಸಹಕಾರ ಸಂಘದ ಸದಸ್ಯ ತಿಪ್ಪೇಶ್, ಪರಿಸರ ವೇದಿಕೆಯ ಮಲ್ಲಿಕಾರ್ಜುನ, ನಾಯಕನಹಟ್ಟಿ ತಿಪ್ಪೇಶ್, ಸುರೇಶ್, ಮರಿಕುಂಟೆ ರುದ್ರೇಶ್, ಸುರೇಶ್ ಚೌಧರಿ, ಡ್ರೈವರ್ ಮಂಜುನಾಥ್, ಬಾರಿಕರ ಶೇಖರಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಎಲೆಕ್ಟ್ರಿಕ್ ಎಂದರೆ ಸ್ಕೂಟರ್, ಕಾರಷ್ಟೇ ಅಲ್ಲ ಬಸ್, ಟ್ರಕ್‌ಗಳೂ ಎಲೆಕ್ಟ್ರಿಕ್ ಆಗುವತ್ತ ಹೆಜ್ಜೆ




**ಸೌರ ವಿದ್ಯುತ್ ಬಳಕೆ ಹೆಚ್ಚಿಸಿದರೆ ಎಲೆಕ್ಟ್ರಿಕ್ ವಾಹನಗಳ ಬಳಕೆ ವೆಚ್ಚ ಕಡಿಮೆಯಾಗಲಿದೆ. ಎಲೆಕ್ಟ್ರಿಕ್ ವಾಹನಗಳ ಇಂಜಿನ್ ಸರಳ ಸ್ವರೂಪದ್ದಾಗಿರುವುದರಿಂದ ನಿರ್ವಹಣೆಯ ಹೊರೆಯೂ ಕಡಿಮೆ.**

ಬಹುತೇಕರು ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಯೋಚಿಸಿದಾಗ, ಅವರ ಮನಸ್ಸಿಗೆ ದ್ವಿಚಕ್ರ ವಾಹನ ಇಲ್ಲವೇ ಕಾರುಗಳು ನೆನಪಿಗೆ ಬರಬಹುದು. ಆದರೆ, ಸದ್ದಿಲ್ಲದೇ ಸಾರಿಗೆ ವಲಯದಲ್ಲಿ ಕ್ರಾಂತಿಯೇ ಆಗುತ್ತಿದೆ. ವಿದ್ಯುದೀಕರಣ ಕೇವಲ ಸಣ್ಣ ವಾಹನಗಳಷ್ಟೇ ಅಲ್ಲದೇ, ಬಹುತೇಕ ಎಲ್ಲಾ ವಾಹನಗಳ ಆಯ್ಕೆಯನ್ನು ಬದಲಿಸುವ ಸಾಧ್ಯತೆ ಇದೆ.

ಎಲೆಕ್ಟ್ರಿಕ್ ಬೈಕ್‌ಗಳಿಂದ ಹಿಡಿದು ಕಾರುಗಳು, ಸರಕು ಸಾಗಣೆ ವಾಹನಗಳು, ಟ್ರ್ಯಾಕ್ಟರ್‌ಗಳು ಹಾಗೂ ಲಾರಿಗಳೂ ಸಹ ಎಲೆಕ್ಟ್ರಿಕ್ ವಾಹನಗಳಾಗಿ ಪರಿವರ್ತನೆ ಆಗಬಹುದು. ಈ ಪ್ರಕ್ರಿಯೆ ಪೂರ್ಣವಾದರೆ, ಭಾರೀ ವಾಹನಗಳ ಸಾಗಣೆಗೆ ಪೆಟ್ರೋಲ್ ಮತ್ತು ಡೀಸೆಲ್ ಸುಡುವ ವೆಚ್ಚ ತಪ್ಪಲಿದೆ.

ಪರಿಸರ ಬದಲಾವಣೆ ತಡೆಯುವಲ್ಲಿ ಎಲೆಕ್ಟ್ರಿಕ್ ಸಾರಿಗೆ ಸಾಕಷ್ಟು ನೆರವಾಗುವ ನಿರೀಕ್ಷೆ ಇದೆ. ಎಲ್ಲ ಕಾರುಗಳು ಎಲೆಕ್ಟ್ರಿಕ್ ವಿಧಾನಕ್ಕೆ ಬದಲಾದರೆ ಒಟ್ಟಾರೆ ಮಾಲಿನ್ಯ ಶೇ.20ರಷ್ಟು ಕಡಿಮೆಯಾಗಲಿದೆ. ಇದು ತೈಲ ಬೆಲೆ ಏರಿಕೆಯಿಂದ ಬಳಲುವುದನ್ನು ತಪ್ಪಿಸುವ ಜೊತೆಗೆ ನಗರಗಳ ವಾಯು ಹೆಚ್ಚು ಶುದ್ಧವಾಗಲಿದೆ.

**120 ವರ್ಷಗಳಿಂದಲೂ ಇವೆ**

ಎಲೆಕ್ಟ್ರಿಕ್ ವಾಹನಗಳು ಹೊಸದೇನೂ ಅಲ್ಲ, 120 ವರ್ಷಗಳಿಂದಲೂ ಎಲೆಕ್ಟ್ರಿಕ್ ವಾಹನಗಳಿವೆ. 1900ರ ವೇಳೆಗೆ ಅಮೆರಿಕದಲ್ಲಿದ್ದ ವಾಹನಗಳ ಪೈಕಿ ಮೂರನೇ ಒಂದರಷ್ಟು ಎಲೆಕ್ಟ್ರಿಕ್ ವಾಹನಗಳಾಗಿದ್ದವು. ಆದರೆ, ಬ್ಯಾಟರಿಗಳ ವೆಚ್ಚ ಹಾಗೂ ತೂಕ ಭಾರೀ ಆದ ಕಾರಣ ಜನರು ಪೆಟ್ರೋಲ್ ಹಾಗೂ ಡೀಸೆಲ್ ವಾಹನಗಳ ಮೊರೆ ಹೋದರು.

**ಮತ್ತೆ ಸ್ಪರ್ಧಾತ್ಮಕವಾದ ಎಲೆಕ್ಟ್ರಿಕ್ ವಾಹನಗಳು**

ಈಗ ಮತ್ತೆ ಪರಿಸ್ಥಿತಿ ಬದಲಾಗಿದೆ. ಸೌರ ವಿದ್ಯುತ್ ವೆಚ್ಚ ಅತ್ಯಂತ ಕಡಿಮೆಯಾಗಿದೆ. ಹಗುವಾರದ ಲಿಥಿಯಂ - ಅಯಾನ್ ಬ್ಯಾಟರಿಗಳ ವೆಚ್ಚ ಹಾಗೂ ತೂಕ ಎರಡೂ ಇಳಿಕೆಯಾಗಿದೆ. ಗಮನಾರ್ಹವಾದ ಅನ್ವೇಷಣೆಗಳಿಂದ ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆ ಸ್ಪರ್ಧಾತ್ಮಕವಾಗುತ್ತಿದೆ.

ಸೌರ ವಿದ್ಯುತ್ ಬಳಕೆ ಹೆಚ್ಚಿಸಿದರೆ ಎಲೆಕ್ಟ್ರಿಕ್ ವಾಹನಗಳ ಬಳಕೆ ವೆಚ್ಚ ಕಡಿಮೆಯಾಗಲಿದೆ. ಎಲೆಕ್ಟ್ರಿಕ್ ವಾಹನಗಳ ಇಂಜಿನ್ ಸರಳ ಸ್ವರೂಪದ್ದಾಗಿರುವುದರಿಂದ ನಿರ್ವಹಣೆಯ ಹೊರೆಯೂ ಕಡಿಮೆ.

**ಎರಡು ದಶಕಗಳ ಸುಧಾರಣೆ**

ಕಳೆದ ಎರಡು ದಶಕಗಳಲ್ಲಿ ಸಾರ್ವಜನಿಕ ಸಾರಿಗೆಯ ಎಲೆಕ್ಟ್ರಿಕ್ ವಾಹನಗಳಲ್ಲಿ ಗಣನೀಯ ಸುಧಾರಣೆಗಳಾಗಿವೆ. ಕಳೆದ ಎರಡು ದಶಕಗಳಲ್ಲಿ ರೈಲು ಹಾಗೂ ಟ್ರಾಮ್‌ಗಳ ತಂತ್ರಜ್ಞಾನ ಉನ್ನತೀಕರಣಗೊಂಡಿದೆ. ಇದು ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆಯಲ್ಲಿ ಉತ್ಸಾಹ ತಂದಿದೆ.

ಪ್ರಸಕ್ತ ಎಲ್ಲ ಎಲೆಕ್ಟ್ರಿಕ್ ಕಾರುಗಳಲ್ಲಿ ರೀಜನರೇಟಿವ್ ಬ್ರೇಕಿಂಗ್ ಇದೆ. ಇದರಿಂದಾಗಿ ಇಂಧನ ವೆಚ್ಚ ಸಾಕಷ್ಟು ಕಡಿಮೆಯಾಗಿದೆ. ರೀಜನರೇಟಿವ್ ಬ್ರೇಕಿಂಗ್ ರೈಲುಗಳಿಗೂ ಬರಲಿದೆ. ಎಲೆಕ್ಟ್ರಿಕ್ ಕಾರುಗಳ ಸುರಕ್ಷತೆಯೂ ಹೆಚ್ಚಾಗುತ್ತಿದೆ. ಉನ್ನತ ವೇಗದ ರೈಲುಗಳ ತಂತ್ರಜ್ಞಾನದ ಪ್ರಗತಿಯು ಟ್ರಾಮ್ ರೈಲುಗಳಿಗೂ ನೆರವಾಗುತ್ತಿದೆ. ಎಲೆಕ್ಟ್ರಿಕ್ ಟ್ರಾಮ್ ರೈಲುಗಳ ಬಗ್ಗೆಯೂ ಈಗ ಗಮನ ಹೆಚ್ಚಾಗುತ್ತಿದೆ.

ಈ ಎಲ್ಲಾ ಕಾರಣಗಳಿಂದಾಗಿ ಸೌರಶಕ್ತಿ ಹಾಗೂ ಬ್ಯಾಟರಿ ತಂತ್ರಜ್ಞಾನಗಳು ಕಾರಿಗೆ ಸೀಮಿತವಾಗಿ ಉಳಿಯುವಂತಿಲ್ಲ. ಮುಂಬರುವ ದಿನಗಳಲ್ಲಿ ಬಹುತೇಕ ಎಲ್ಲಾ ಸಾರಿಗೆ ವಾಹನಗಳು ಎಲೆಕ್ಟ್ರಿಕ್ ಸ್ವರೂಪಕ್ಕೆ ಬದಲಾಗುವ ಬಾಗಿಲುಗಳು ತೆರೆದಿವೆ.

**ವಿಶ್ವಾದ್ಯಂತ ಹೆಚ್ಚಿದ ಎಲೆಕ್ಟ್ರಿಕ್ ಸೆಳೆತ**

ವಿಶ್ವದಾದ್ಯಂತ ಎಲೆಕ್ಟ್ರಿಕ್ ಸ್ಕೂಟರ್ ಹಾಗೂ ಬೈಕ್‌ಗಳ ಆಕರ್ಷಣೆ ಹೆಚ್ಚಾಗುತ್ತಿದೆ. ಪ್ರತಿ ವರ್ಷ ಜಗತ್ತಿನಾದ್ಯಂತ ಎಲೆಕ್ಟ್ರಿಕ್ ಸ್ಕೂಟರ್‌ಗಳ ಪ್ರಮಾಣ ಶೇ.17ರಷ್ಟು ಹೆಚ್ಚಾಗುತ್ತಿದೆ. ಪ್ರಸಕ್ತ ಎಲೆಕ್ಟ್ರಿಕ್ ಸ್ಕೂಟರ್‌ಗಳ ಮಾರಾಟ ಮೌಲ್ಯ ವಿಶ್ವದಾದ್ಯಂತ 50 ಶತಕೋಟಿ ಡಾಲರ್ ಆಗಿದೆ. 2030ರ ವೇಳೆಗೆ ಇದು ನಾಲ್ಕು ಪಟ್ಟು ಹೆಚ್ಚಾಗುವ ನಿರೀಕ್ಷೆ ಇದೆ.

ವಿಶ್ವದ ಹಲವೆಡೆ ಸರ್ಕಾರದ ಹೆಚ್ಚಿನ ಬೆಂಬಲ ಇಲ್ಲದೆಯೂ ಜನರು ಎಲೆಕ್ಟ್ರಿಕ್ ವಾಹನಗಳ ಖರೀದಿಗೆ ಮುಂದಾಗುತ್ತಿದ್ದಾರೆ. ಸರ್ಕಾರಗಳು ಎಲೆಕ್ಟ್ರಿಕ್ ವಾಹನಗಳಿಗೆ ಸೂಕ್ತ ಉತ್ತೇಜನ ನೀಡಿದಲ್ಲಿ, ಜಗತ್ತಿನಾದ್ಯಂತ ಸಾರಿಗೆ ಪರಿಸ್ಥಿತಿ ಬದಲಾಗುವ ಸಾಧ್ಯತೆ ಇದೆ.

- ಅಸ್ಮಿತಾ

# ಸೋರುತಿಹವು ಮಾನವೀಯ ಸಂಬಂಧಗಳು





## ಬಸವಪ್ರಭು ಶ್ರೀ

ದಾವಣಗೆರೆ, ಮೇ 5- ಹಿಂದೆ ಗುಡಿಸಲು, ಹಂಚಿನ ಹಾಗೂ ಮಾಳಿಗೆ ಮನೆಗಳಿದ್ದು, ಮಳೆ ಬಂದರೆ ಸೋರುತ್ತಿದ್ದವು. ಅಲ್ಲಿ ಸಂಬಂಧ ಕಲ್ಲಿನಂತೆ ಗಟ್ಟಿಯಾಗಿರುತ್ತಿದ್ದವು. ಆದರೀಗ ಸಿಮೆಂಟ್ ಮನೆಗಳು ನಿರ್ಮಾಣವಾಗಿವೆ. ಮನೆ ಸೋರುವ ಬದಲು ಸಂಬಂಧಗಳು ಸೋರುತ್ತಿವೆ ಎಂದು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಬಸವ ಜಯಂತ್ಯೋತ್ಸವ ಸಮಿತಿ, ಲಿಂಗಾಯತ ತರುಣ ಸಂಘ, ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶ್ರೀ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಬಸವ ಜಯಂತಿ ಅಂಗವಾಗಿ ಮೊನ್ನೆ ಆಯೋಜಿಸಿದ್ದ ಜಮುರಾ ನಾಟಕೋತ್ಸವದ ಎರಡನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪ್ರಸ್ತುತ ಮಾನವೀಯ ಸಂಬಂಧಗಳು ನಾಟಕೀಯವಾಗಿವೆ. ಪ್ರೀತಿ, ವಿಶ್ವಾಸ, ನಂಬಿಕೆಗಳು ಮರೆಯಾಗಿ, ಎಲ್ಲೆಡೆ ಸ್ವಾರ್ಥ, ಹೊಟ್ಟೆಕಿಚ್ಚು, ಅಸೂಯೆ, ಅಹಂಕಾರ, ಸ್ವಪ್ರತಿಷ್ಠೆಗಳಿಂದ ಸಂಬಂಧಗಳು ಮುರಿಯುತ್ತಿವೆ ಎಂದರು.

ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಮಾತನಾಡಿ, ರಾಜ್ಯದಲ್ಲಿ ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೇ ಬಸವ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಜಾರಿಗೆ ತರಲಾಯಿತು ಎಂದರು.

ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ಮಾತನಾಡಿ, ದಾವಣಗೆರೆಯಲ್ಲಿ ಏಕಕಾಲಕ್ಕೆ ಮೂರ್ನಾಲ್ಕು ನಾಟಕ ಕಂಪನಿಗಳು ಉತ್ತಮ ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದವು. ಆದರೀಗ ನಾಟಕಗಳು ಕಣ್ಮರೆಯಾಗುತ್ತಿದ್ದು, ಕಲಾವಿದರ ಬದುಕು ದುಸ್ತರವಾಗಿದೆ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು.

ಬಸವ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ.ಜೆ. ಅಜಯ್ ಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಿನಿಮಾ, ಮೊಬೈಲ್ ಹಾವಳಿಯಿಂದಾಗಿ ನಾಟಕಗಳು ಕಣ್ಮರೆಯಾಗುತ್ತಿವೆ ಎಂದರು.

ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿದರು. ನಿವೃತ್ತ ಜಿಲ್ಲಾ ಪರಿಸರ ಅಧಿಕಾರಿ ಕೆ.ಬಿ. ಕೊಟ್ರೇಶ್, ವೃತ್ತಿ ರಂಗಭೂಮಿ ಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿ ಮಹೇಶ್ವರಪ್ಪ, ವಿಭೂತಿ ಬಸವಾನಂದ ಶರಣರು, ಯುಗಧರ್ಮ ರಾಮಣ್ಣ ಉಪಸ್ಥಿತರಿದ್ದರು. ಎನ್. ಜೆ. ಶಿವಕುಮಾರ್ ನಿರೂಪಿಸಿದರು.

ಕಾರ್ಯಕ್ರಮದ ನಂತರ ಮಹಾಂತೇಶ ರಾಮದುರ್ಗ ರಚನೆ, ನಿರ್ದೇಶನದ 'ಸೋರುತಿಹುದು ಸಂಬಂಧ' ನಾಟಕವನ್ನು ಜಮುರಾ ಸುತ್ತಾಟ ತಂಡದವರು ಅಭಿನಯಿಸಿದರು.

# ವಿಶ್ವಕರ್ಮ ಸಮಾಜದಿಂದ 11 ರಂದು ಉಪನಯನ

ದಾವಣಗೆರೆ, ಮೇ 5- ವಿಶ್ವಕರ್ಮ ಸಮಾಜದಿಂದ ಇದೇ ದಿನಾಂಕ 11ರಿಂದ 13 ರವರೆಗೆ 39ನೇ ವರ್ಷದ ಸಾಮೂಹಿಕ ಉಪನಯನ, ವಿವಾಹ ಮಹೋತ್ಸವ ಹಾಗೂ ಶ್ರೀ ಕಾಳಿಕಾದೇವಿ ಮೂರ್ತಿ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ದಿನಾಂಕ 11 ರಂದು ಬ್ರಾಹ್ಮೀ ಮುಹೂರ್ತದಲ್ಲಿ ದೇವಸ್ಥಾನ ಆವರಣದಲ್ಲಿ ಶ್ರೀ ಕಾಳಿಕಾದೇವಿಯ ಮೂರ್ತಿ ಪುನರ್ ಪ್ರತಿಷ್ಠಾಪನೆ, ದಿನಾಂಕ 13ರಂದು ಬ್ರಾಹ್ಮೀ ಮುಹೂರ್ತದಲ್ಲಿ ವಟುಗಳಿಗೆ ಯಜ್ಞೋಪವೀತ ಧಾರಣೆ ಮತ್ತು ಬ್ರಹ್ಮೋಪದೇಶ ಹಾಗೂ ಬೆಳಿಗ್ಗೆ 7.10 ರಿಂದ ಸಾಮೂಹಿಕ ವಿವಾಹ ಮಹೋತ್ಸವ ಜರುಗಲಿದೆ. ವಿವರಕ್ಕೆ ಇದೇ ದಿನಾಂಕ 10 ರೊಳಗಾಗಿ ಕಾಳಿಕಾಂಬ ಕಲ್ಯಾಣ ಮಂಟಪದಲ್ಲಿ ಹೆಸರು ನೋಂದಾಯಿಸುವಂತೆ ಸಮಾಜ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್ (97318 70799) ತಿಳಿಸಿದ್ದಾರೆ.

# ಉತ್ತಮ ಬದುಕಿಗೆ ಸಂಸ್ಕಾರ ಮುಖ್ಯ

## ಯಲವಟ್ಟಿ ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಅಭಿಮತ




ಮಲೇಬೆನ್ನೂರು, ಮೇ 5- ಬರೀ ಶಿಕ್ಷಣ ಪಡೆದರೆ ಸಾಲದು, ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿಯನ್ನೂ ಮೈಗೂಡಿಸಿಕೊಳ್ಳಬೇಕೆಂದು ಯಲವಟ್ಟಿಯ ಗುರು ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಯಲವಟ್ಟಿಯ ತಮ್ಮ ಆಶ್ರಮದಲ್ಲಿ ಅಕ್ಷಯ ತೃತೀಯ ಅಮಾವಾಸ್ಯೆ ಅಂಗವಾಗಿ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದ ದಿವ್ಯ ನೇತೃತ್ವ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮನುಷ್ಯನ ಉತ್ತಮ ಬದುಕಿಗೆ ಸಂಸ್ಕಾರ ಬಹಳ ಮುಖ್ಯವಾಗಿದ್ದು, ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಜೊತೆಗೆ ತಂದೆ-ತಾಯಿ, ಗುರುಗಳು, ನೆರೆಹೊರೆಯವರ ಬಗ್ಗೆ ಪ್ರೀತಿ, ಗೌರವದ ಭಾವನೆಗಳನ್ನು ಬೆಳೆಸಿ ಎಂದರು.

ದಾಗಿನಕಟ್ಟೆಯ ಶ್ರೀ ಸಿದ್ಧಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ ಮಾತನಾಡಿ, ಸತ್ಸಂಗದ ಮರ್ಮ ತಿಳಿದವನ ಬದುಕು ಬಂಗಾರವಾಗುತ್ತದೆ ಎಂದರು. ಅನ್ನ ದಾಸೋಹಿಗಳಾಗಿದ್ದ ಹೊಳೆಸಿರಿಗೆರೆಯ ಮಾಗೋಡ್ ಈಶ್ವರಪ್ಪ ಮತ್ತು ಕುಟುಂಬದವರನ್ನು, ಶ್ರೀಗಳನ್ನು ಸನ್ಮಾನಿಸಿ, ಗೌರವಿಸಿದರು.

ಗ್ರಾಮದ ಜಿ. ಬಸಪ್ಪ ಮೇಷ್ಟ್ರು, ಮುರುಗೆಪ್ಪ ಗೌಡ್ರು, ಹೊಸಮನಿ ಮಲ್ಲಪ್ಪ, ಎ. ಸುರೇಶ್, ವೇದಮೂರ್ತಿ ರೇವಣಸಿದ್ದಯ್ಯ, ಹಲಸಬಾಳ್ ಸಿದ್ದೇಶ್, ಜಿಗಳಿಯ ಜಿ. ಆನಂದಪ್ಪ, ರಂಗಪ್ಪ, ಪತ್ರಕರ್ತ ಪ್ರಕಾಶ್, ಕುಂಬಳೂರಿನ ಕೆ. ಕುಬೇರಪ್ಪ, ಹೆಚ್.ಎಂ. ಸದಾಶಿವ, ದಾಗಿನಕಟ್ಟೆಯ ವಕೀಲ ಚಂದ್ರಪ್ಪ, ಹೊಳೆಸಿರಿಗೆರೆಯ ಮಾಳಗಿ ಕೊಟ್ರಪ್ಪ, ಮಾಗೋಡ್ ಸಿದ್ದಣ್ಣ, ಶಿಕ್ಷಕ ಮಾಗೋಡ್ ಮಹೇಶ್ವರಪ್ಪ, ಕೆ.ಎನ್. ಹಳ್ಳಿಯ ಕೃಷ್ಣಪ್ಪ, ಶಿಕ್ಷಕ ನಂದಿಗುಡಿ ಬಸಯ್ಯ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು. ಸಿರಿಗೆರೆಯ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

# ರಾತ್ರಿ ವೇಳೆ ರೈಲ್ವೆ ನಿಲ್ದಾಣದಲ್ಲಿ ತಿಂಡಿ ವ್ಯವಸ್ಥೆಗೆ ಒತ್ತಾಯ

ದಾವಣಗೆರೆ,ಮೇ 5-ರೈಲ್ವೆ ಸ್ಟೇಷನ್‌ಗಳಲ್ಲಿ ರಾತ್ರಿ ವೇಳೆ 11ರಿಂದ ಬೆಳಗಿನ ಜಾವ 5 ಗಂಟೆಯವರೆಗೂ ಬಿಸಿ ಬಿಸಿ ಇಡ್ಲಿ ವಡಾ, ರವೆ ಇಡ್ಲಿ, ರವೆ ದೋಸೆ ಮತ್ತಿತರೆ ತಿಂಡಿಗಳನ್ನು ತಯಾರಿಸಿ ವಿತರಿಸುವ ವ್ಯವಸ್ಥೆ ಮಾಡುವಂತೆ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಮತ್ತು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘವು ಒತ್ತಾಯಿಸಿದೆ. ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರಿಗೆ ಸಂಘದ ಅಧ್ಯಕ್ಷ ಬಿ.ಮಾಲತೇಶ್ ಮತ್ತು ಪ್ರಧಾನ ಕಾರ್ಯದರ್ಶಿ ಬೂಸ್ನೂರು ಪ್ರಕಾಶ್ ಅವರುಗಳು ಪತ್ರ ಬರೆದು ಒತ್ತಾಯಿಸಿದ್ದಾರೆ.

# ಹೆಸರು ಬಳಸಿ ಬರೆದ ಬಸವೇಶ್ವರರ ಚಿತ್ರ



ಶ್ರೀ ಜಗಜ್ಜ್ಯೋತಿ ಬಸವೇಶ್ವರರ ಜಯಂತಿ ಪ್ರಯುಕ್ತ ಅವರ ಹೆಸರನ್ನು 501 ಬಾರಿ ಬಳಸಿ, 'Basava' ಎಂಬ ಇಂಗ್ಲೀಷ್ ಅಕ್ಷರಗಳಿಂದ ಬರೆದು ರಚಿಸಿರುವ ಆಕರ್ಷಕ ಚಿತ್ರ .

ರಚನೆ; ಶಾಂತಯ್ಯ ಪರಡಿಮಠ, ಚಿತ್ರಕಲಾ ಶಿಕ್ಷಕ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ ದಾವಣಗೆರೆ.

# ಜಿಗಳಿಯಲ್ಲಿ ಬಸವ ಜಯಂತಿ



ಮಲೇಬೆನ್ನೂರು, ಮೇ 5- ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಆಚರಿಸಲಾಯಿತು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೇಣುಕಮ್ಮ ಮಡಿವಾಳರ ರಂಗಪ್ಪ, ಉಪಾಧ್ಯಕ್ಷ ಡಿ.ಎಂ ಹರೀಶ್, ಸದಸ್ಯ ಎನ್.ಎಂ ಪಾಟೀಲ್, ಕೆ.ಜಿ ಬಸವರಾಜ್, ಎಕ್ಕೆಗೊಂದಿ ಚೇತನ್, ಶ್ರೀಮತಿ ಕರಿಯಮ್ಮ, ಶ್ರೀಮತಿ ಯಶೋಧ ಹಾಲೇಶ್ ಕುಮಾರ್, ಪಿಡಿಓ ಉಮೇಶ್, ಕಾರ್ಯದರ್ಶಿ ಶೇಖರ್‌ನಾಯ್ಕ, ಬಿಲ್ ಕಲೆಕ್ಟರ್ ಬಿ.ಉಮೇಶ್, ಗ್ರಾಮದ ಕೆ.ಎಂ. ರಾಮಪ್ಪ, ಜಿ.ಪಿ ಹನುಮಗೌಡ, ಮಾಕನೂರು ಶಿವು, ಹೆಚ್.ಬಿ ವೀರೇಶ್, ಪತ್ರಕರ್ತ ಪ್ರಕಾಶ್, ಬಿ.ದಾನಪ್ಪ, ಬಸವರಾಜಯ್ಯ, ಪ್ರಕಾಶ್ ಮತ್ತು ಬಸವರಾಜ ಮತ್ತಿತರರು ಭಾಗವಹಿಸಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಶ್ರೀ ಎ.ಬಿ. ಓಂಕಾರಪ್ಪ ಮತ್ತು ಕುಟುಂಬ ವರ್ಗದವರ ಸೇವಾರ್ಥ, ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಐಸ್ ಕ್ರೀಂ ಸಪ್ಲೈಗೆ ಹುಡುಗರು ಬೇಕಾಗಿದ್ದಾರೆ ಮತ್ತು ಡ್ರೈವರ್ ಕಮ್ ಸೇಲ್ಸ್‌ಗೆ ಬೇಕಾಗಿದ್ದಾರೆ.
ಸಂಪರ್ಕಿಸಿ :
96201 28586

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
73491 56380

**ಬೇಕಾಗಿದ್ದಾರೆ**
ಬಿನ್ನಿ ಕಂಪನಿ ರೋಡ್‌ನಲ್ಲಿ ಇರುವ ಮನೆಗೆ ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ.
63631 97523

**ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು ಮತ್ತು ಮಹಿಳೆಯರು ಆಸಕ್ತಿಯುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿ :
94821 09492, 94807 77338

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಮತ್ತು ಸೆಕ್ಯೂರಿಟಿ ಬೇಕಾಗಿದ್ದಾರೆ.
ಸಂಬಳ 9000. ಊಟ, ರೂಂ ಉಚಿತ ಸಂಪರ್ಕಿಸಿ :
97400 98047, 97400 98064

**ತಕ್ಷಣ ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಪುರುಷ ಹೆಲ್ಪರ್ ಬೇಕಾಗಿದ್ದಾರೆ.
98457 75768
88846 75884

**ಮನೆ ಬಾಡಿಗೆಗೆ ಇದೆ**
ಬಾಲಾಜಿ ನಗರ ಕುಂದುವಾಡ ಕೆರೆ ಹತ್ತಿರ ಗ್ರೌಂಡ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಇರುವ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಮಾತ್ರ
ಸಂಪರ್ಕಿಸಿ.
99725 51006

**ಬೇಕಾಗಿದ್ದಾರೆ**
ಪವರ್ ಸ್ಟಾರ್ ಗೀಜಾರ್ ಕಂಪನಿ & ಪರ್ವ ಮಿಲೆಟ್ ಆಯುರ್ವೇದಿಕ್ ಕಂಪನಿಯಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿ :
91499 63298, 77602 59827

**ONE STOP SOLUTIONS**
* EC (Encumbarence Certificate
* Certified Copies of Sale Deed
* Khatha Transfer
* Khatha Extract
(For application & applying)
Call: 96118 66449

**WANTED**
Audit Assistants 4 Posts Female. Qualification : B.Com Pass Or Fail with Computer Knoweldge. Walk in Interview on 6.5.2022 & 7.5.2022 10 AM to 8 PM
Fayaz Ahammed & Associates, Auditor & Tax Consultant
Room No. B11 & 12, 1st Floor, Muslim Hostel Shoping Complex, Ambedkar Circle, Davanagere.
M : 94480 45778

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**ಮನೆ ಮಾರಾಟಕ್ಕೆ ಇದೆ**
ಚಿಕ್ಕ ಬೂದಾಳ್‌ನಲ್ಲಿ ಮನೆ ಮಾರಾಟಕ್ಕೆ ಇದೆ.
99027 57300
97405 92589

**ಸೈಟು ಮಾರಾಟಕ್ಕಿದೆ**
ಪಶ್ಚಿಮ ದಿಕ್ಕಿನ ಸೈಟು ಎಂ.ಬಿ ಸಿಟಿಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ :
90361 89699, 72592 69940

**ಬೇಕಾಗಿದ್ದಾರೆ**
ಅಟೆಂಡರ್ ಕೆಲಸಕ್ಕೆ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ ಸ್ಥಳೀಯ ಯುವಕರು ಬೇಕಾಗಿದ್ದಾರೆ
ಅಂದನೂರು ಚಿಟ್ಸ್ (ರಿ)
ರಾಂ & ಕೋ ಸರ್ಕಲ್, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಕೃಷ್ಣ ಫ್ಲೆಕ್ಸ್ ಎಂಟರ್ ಪ್ರೈಸಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಹಳೇ ಬಸ್ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
96117 71970

**ಮೂರು ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ದೇವಸ್ಥಾನದ ಬಳಿ ಮೊದಲನೇ ಮಹಡಿಯಲ್ಲಿ ಬೋರ್ ವಾಟರ್ ಮತ್ತು ಸೋಲಾರ್ ಸೌಲಭ್ಯವುಳ್ಳ ಮೂರು ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
99006 40777

**3 ಬೆಡ್ ರೂಂ ಮನೆ ಬಾಡಿಗೆಗಿದೆ**
Solar, A.C, ಬೋರ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯಯುಳ್ಳ ಮನೆಯಾಗಿದೆ.
MCC 'B' Block.
98440 52928

**HOUSES FOR RENT**
Three Independent Furnished
Ground Floor - Two Beded
First Floor -Two Beded
Second Floor - Single Bed
Sri Basaweshwara Badawane
98440 07469

**ತಕ್ಷಣ ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ರೂಂ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಆಕರ್ಷಕ ವೇತನದೊಂದಿಗೆ ಊಟ, ವಸತಿ ನೀಡಲಾಗುವುದು.
81528 82277, 97428 89451

**ಟ್ಯೂಷನ್**
ನಿವೃತ್ತ ಪ್ರೊಫೆಸರ್ U. ಗುರುಸ್ವಾಮಿ ಅವರಿಂದ ರಸಾಯನಶಾಸ್ತ್ರ ವಿಷಯದಲ್ಲಿ ಪ್ರಥಮ ಮತ್ತು ದ್ವಿತೀಯ PU ವಿದ್ಯಾರ್ಥಿಗಳಿಗೆ ಟ್ಯೂಷನ್ ಮಾಡಲಾಗುತ್ತದೆ.
ಸಂದರ್ಶಿಸಿ
MCC 'B' Block DVG
M : 99720 66772

**SSLC/PUC/ITI**
ಪಾಸ್/ಫೇಲ್ ಮುಂದೇನು? ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್- 2 ವರ್ಷ
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
ವಿಳಾಸ: ಶ್ರೀ ಗಂಗೋತ್ರಿ ಎಜುಕೇಶನ್ ಟ್ರಸ್ಟ್ ಲಾಯರ್ ರೋಡ್ ದಾವಣಗೆರೆ.
86602 35013
ರಿಸೆಪ್ಷನಿಸ್ಟ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.

**ಲಿಂಗಾಯತ ವಧು-ವರ**
ಲಿಂಗಾಯತ, ಜಂಗಮ ಇಂಜಿನಿಯರ್ಸ್ (ಸ್ವದೇಶ ಹಾಗೂ ವಿದೇಶ) ಡಾಕ್ಟರ್ಸ್, MBBS, MD, MS, BMS, MDS, BAMS, BHMS ವಧು-ವರರಿಗಾಗಿ
ಸಂಪರ್ಕಿಸಿರಿ.
M : 98807 29108

**WANTED**
delivery executive
City : Davangere
Full time n part time
Weekly earn 4000 to 5000
Free joining. Contact :
+91 90363 68223

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿ, ಕುಂದವಾಡ 30x40 ದಕ್ಷಿಣ ದಿಕ್ಕಿನ ಎರಡು ಸೈಟುಗಳು ಮಾರಾಟಕ್ಕಿವೆ. ಫಲಾನುಭವಿಗಳಿಂದ ನೇರ ಮಾರಾಟ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
63605 67975

**ಬೇಕಾಗಿದ್ದಾರೆ**
ಅಡಿಕೆ ತೋಟದ ಅನುಭವ ಇರುವ ಕುಟುಂಬ ಬೇಕಾಗಿದ್ದಾರೆ.
ಇಚ್ಛೆ ಇರುವವರು ಸಂಪರ್ಕಿಸಿ :
M : 99002 65653

**WORK FROM HOME**
Male/Female, Full / Part time
Hand writing work. Small Letter to Capital Letter
Earn Per month 12,000/- to 15,000/-
89718 52431

**XRAY MACHINE FOR SALE**
CONTACT
90711 06106

**Teachers Wanted**
Sir M.Visheshwarayya Residential School
P.B. Road, Dodda bathi.
Subject : English, Kannada, Maths, Hindi, Science, Social

**HOUSE FOR RENT**
15x50 Ground floor single Bedroom House with Parking Facility at, 5th Cross K.B. Extn, Near Muslim Hostel & Jayadeva Circle
IRFAN, 90355 01898

**ಸೈಟ್ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಲೇಔಟ್, ಶಿವಗಂಗೆ ಕಲ್ಯಾಣ ಮಂಟಪದ ಹಿಂಭಾಗ
41x92 ದಕ್ಷಿಣ ಸೈಟ್ ಮಾರಾಟಕ್ಕಿದೆ.
98448 82366

**ಬೇಕಾಗಿದ್ದಾರೆ**
Computer Operator - 02
Salary-8000/- ಆಯಾ/Office Boy - 02
ವಿನ್ನರ್ಸ್ ಕರಿಯರ್ ಅಕಾಡೆಮಿ
2ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ಸ್ಟೇಡಿಯಂ ಹತ್ತಿರ, ದಾವಣಗೆರೆ.
91485 96892, 98869 97892

**ಉದ್ಯೋಗಾವಕಾಶ**
ಯುವಕ /ಯುವತಿಯರಿಗೆ ನಿರುದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ ಯಾವುದೇ ವಿದ್ಯಾಭ್ಯಾಸ ಇದ್ದರೂ ಪಾರ್ಟ್ ಟೈಮ್ /ಫುಲ್ ಟೈಮ್ ಕೆಲಸ ಮಾಡಿ ತಿಂಗಳಿಗೆ 10 ರಿಂದ 50 ಸಾವಿರದವರೆಗೆ ಗಳಿಸುವ ಮತ್ತು ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ
76769 57042, 70194 26891

**TO-LET**
Commercial Space 2400 Sft for Rent G+1 with 80ft road facing near RTO office on Kondajji Main road. available in different size suitable for Bank/ATM/Supermarket/Showroom/ Poly clinic/Office/Parlour/GYM/ Studio/Yoga Centre etc.
99864 52968

**15 ದಿನಗಳಲ್ಲಿ ಸುಲಭ ಪರಿಹಾರ**
ಥೆರಪಿ ಉಚಿತ. ಬಿಪಿ, ಶುಗರ್, ವೆರಿಕೋಸ್ ವೇನ್ , ಬೆನ್ನು/ ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಪಾದದಲ್ಲಿ ಉರಿ ಇತರೆ ಯಾವುದೇ ಸಮಸ್ಯೆ ಗಳಿಗೆ ನೇರ ಪರಿಹಾರ.
HOME DEMO ಸೌಲಭ್ಯ ವಿದೆ.
T&C ಕಂಪ್ಯಾನಿಯೋ ಮೆಡಿಟೆಕ್, ಲಾಯರ್ ರೋಡ್.
86602 35013

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**STAFF REQUIRED**
For PU College
Subjects=computer science & English. Address : JH patel Badavane , Nagnur Road Shamnuru. Contact no :
99168 18369

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**WANTED**
SALES MAN / DELIVERY MAN
apply or mail your bio data to
PARIMALA COFFEE CO
MANDIPET, DAVANGERE
MAIL: info@parimalacoffee.com
94482 72734

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC
Degree, Pharmacy & BHMS
(Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 90080 67049

**ಬೇಲರ್ ದಾರ ದೊರೆಯುತ್ತದೆ**
ದಾವಣಗೆರೆಯ ಈರುಳ್ಳಿ ಮಾರುಕಟ್ಟೆ ರಸ್ತೆಯಲ್ಲಿರುವ ಅಕ್ಕಿ ಮಳಿಗೆ ಹಿಂಭಾಗದ
ಕುಶಾಲ್ ಎಂಟರ್ ಪ್ರೈಸಸ್
ಮಳಿಗೆ ಸಂಖ್ಯೆ 7 ರಲ್ಲಿ ಭತ್ತ, ರಾಗಿ, ಹುಲ್ಲು ಬಂಡಲ್ ಕಟ್ಟುವ ಬೇಲರ್ ದಾರ ದೊರೆಯುತ್ತದೆ.
ಸಂಪರ್ಕಿಸಿ : ಶಿವರಾಜ್ ಕುಂಕೋದ್
90081 22113

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/ PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸಂಪರ್ಕಿಸಿ**
ನುರಿತ ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ವಸತಿ ಸೌಲಭ್ಯ ಇರುತ್ತದೆ.
72044 00262, 98861 26961

**ಭವಿಷ್ಯ Astrologer**
ಹಂಪನಾಳ್ ಮೋಡಿ ಮಾಂತ್ರಿಕ ಗಿಡ್ಡಪ್ಪ
ನಂಬಿದಲ್ಲಿ ಮೋಸವಿಲ್ಲ ಭಟ್ಟಂಗಿ ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ.ವಶೀಕರಣ, ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ :
99807 70791

**RTO ಆಫೀಸ್ ಎದುರಿಗೆ**
20x30 ಅಲಿನೇಷನ್, 30x40 ರೆವಿನ್ಯೂ ಸೈಟುಗಳು ಮಾರಾಟಕ್ಕಿವೆ. ಅಮರಾವತಿ- ಹರಿಹರ ಫೈನಲ್ ಅಪ್ರೂವಲ್ 30x40 ನಿವೇಶನಗಳು 3,60,000/- ರೂ ಕಂತಿನಲ್ಲಿ ಸಿಗುತ್ತವೆ. 5 ವರ್ಷ ಅವಧಿ 60 ತಿಂಗಳು ತಿಂಗಳಿಗೆ 6,000/- ರೂಗಳು ಸಂಪರ್ಕಿಸಿ :
93534 88902

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**Required**
* 3 male candidates Helpers required for vehicle.
Education qualification 10th or 12th pass.
91139 24513

## ಜಿಲ್ಲೆಯಲ್ಲಿನ ನಿನ್ನೆಯ ಮಳೆಗೆ 3.20 ಲಕ್ಷ ರೂ. ನಷ್ಟು ಹಾನಿ

ದಾವಣಗೆರೆ, ಮೇ 5- ಜಿಲ್ಲೆಯಲ್ಲಿ ಮೇ 4 ರಂದು 11.0 ಮಿ.ಮೀ. ಸರಾಸರಿ ಮಳೆಯಾಗಿದ್ದು, 3.20 ಲಕ್ಷ ರೂ ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿ 14.0 ಮಿ.ಮೀ, ದಾವಣಗೆರೆ ತಾಲ್ಲೂಕಿನಲ್ಲಿ 6.0 ಮೀ.ಮಿ, ಹರಿಹರದಲ್ಲಿ 11.0 ಮಿ.ಮೀ, ಹೊನ್ನಾಳಿ 14.0 ಮಿ.ಮೀ ಮಳೆಯಾಗಿದೆ. ಜಗಳೂರು 2.0 ಮಿ.ಮೀ, ನ್ಯಾಮತಿಯಲ್ಲಿ 26.0 ಮಿ.ಮೀ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 2 ಕಚ್ಚಾ ಮನೆ ಭಾಗಶಃ ಹಾನಿಯಾಗಿದ್ದು, ರೂ.0.60 ಲಕ್ಷ ಮತ್ತು 4 ಎಕರೆ ಬಾಳೆಬೆಳೆ ಹಾನಿಯಾಗಿದ್ದು, ರೂ.0.70 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 3 ಕಚ್ಚಾ ಮನೆ ಭಾಗಶಃ ಹಾನಿಯಾಗಿದ್ದು, ರೂ.0.90 ಲಕ್ಷ ಮತ್ತು 4 ಎಕರೆ ಭತ್ತದ ಬೆಳೆ ಹಾನಿಯಾಗಿದ್ದು, ರೂ.0.30 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 1.20 ಎಕರೆ ಮೆಕ್ಕೆಜೋಳದ ಬೆಳೆ ಹಾನಿಯಾಗಿದ್ದು, ರೂ.0.70 ಲಕ್ಷ ಅಂದಾಜು ನಷ್ಟ ಸಂಭವಿಸಿದೆ. ಒಟ್ಟು ರೂ. 3.20 ಲಕ್ಷ ಅಂದಾಜು ನಷ್ಟ ಸಂಭವಿಸಿದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

## ಇಂದು ವಟುಗಳಿಗೆ ಧರ್ಮೋಪನಯನ

ಶ್ರೀ ಶಂಕರ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಭಗವತ್ಪಾದರ ಜಯಂತಿ ಅಂಗವಾಗಿ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಧರ್ಮೋಪನಯನವು ಶ್ರೀ ಶಂಕರ ಸಮುದಾಯ ಭವನದಲ್ಲಿ ಇಂದು ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಷಿ ತಿಳಿಸಿದ್ದಾರೆ.

# ತ್ವರಿತಗತಿಯಲ್ಲಿ ರಸ್ತೆ ಅಗಲೀಕರಣದ ಕಾಮಗಾರಿ ಕೈಗೊಳ್ಳದಿದ್ದರೆ ಕ್ರಮ



### ಅಧಿಕಾರಿಗಳಿಗೆ ಶಾಸಕ ರೇಣುಕಾಚಾರ್ಯ ಎಚ್ಚರಿಕೆ

ನ್ಯಾಮತಿ, ಮೇ 5- ಪಟ್ಟಣದ ಕುಂಬಾರ ಬೀದಿ ರಸ್ತೆ ಹಾಗೂ ಆಂಜನೇಯ ದೇವಸ್ಥಾನದ ರಸ್ತೆ ಅಗಲೀಕರಣ ಕಾಮಗಾರಿಗಳ ವೇಗವನ್ನು ಹೆಚ್ಚಿಸದೇ ಇದ್ದರೆ, ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ರಸ್ತೆ ಅಗಲೀಕರಣ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಕುಂಬಾರ ಬೀದಿಗೆ ಇಂದು ಭೇಟಿ ನೀಡಿದ್ದ ಅವರು, ಕಾಮಗಾರಿ ಪರಿಶೀಲನೆ ನಡೆಸಿ ಮಾತನಾಡಿದರು.

ಜನರು ನನ್ನ ಮಾತಿಗೆ ಬೆಲೆ ಕೊಟ್ಟು ರಸ್ತೆ ಅಗಲೀಕರಣ ಮಾಡಲು ಅವರೇ ಮನೆಗಳನ್ನು ತೆರವು ಮಾಡಿಕೊಟ್ಟಿದ್ದಾರೆ. ಆದರೆ ಗುತ್ತಿಗೆದಾರರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದ್ದು, ನಾನು ಜನರಿಗೆ ಹೇಗೆ ಮುಖ ತೋರಿಸಲಿ ಎಂದು ಬೇಸರ ವ್ಯಕ್ತ ಪಡಿಸಿದರು.

ಇದೀಗ ಮಳೆಗಾಲ ಆರಂಭವಾಗಿದ್ದು ಹಬ್ಬ, ಹರಿದಿನಗಳು ಬರುತ್ತಿವೆ. ಜನರು ಹಬ್ಬವನ್ನು ಹೇಗೆ ಮಾಡುತ್ತಾರೆ ಎಂದ ರೇಣುಕಾಚಾರ್ಯ ಅವರು, ಅಧಿಕಾರಿಗಳ ನಿರ್ಲಕ್ಷ್ಯದಿಂದ ನಾನು ಜನರ ಬಳಿ ಚೀಮಾರಿ ಹಾಕಿಸಿಕೊಳ್ಳಬೇಕಾ ಎಂದು ಆಕ್ರೋಶ ಹೊರ ಹಾಕಿದರು.

ವಾಲ್ಮೀಕಿ ರಸ್ತೆ ಹಾಗೂ ವೀರಭದ್ರೇಶ್ವರ ದೇವಸ್ಥಾನ ರಸ್ತೆ ಅಗಲೀಕರಣ ಕಾಮಗಾರಿ ಪೆಂಡಿಂಗ್ ಇದೇ ಎಂದ ರೇಣುಕಾಚಾರ್ಯ, ಕಾಮಗಾರಿಯನ್ನು ನಿಧಾನಗತಿಯಿಂದ ಮಾಡುತ್ತಿದ್ದು, ನಾನು ಜನರಿಗೆ ಹೇಗೆ ಉತ್ತರ ನೀಡಲಿ ಎಂದು ಪ್ರಶ್ನಿಸಿದರು.

25 ಕೋಟಿ ರೂ. ವೆಚ್ಚದಲ್ಲಿ ನ್ಯಾಮತಿ ಪಟ್ಟಣದ ಕುಂಬಾರ ಬೀದಿ, ಆಂಜನೇಯ ದೇವಸ್ಥಾನದ ರಸ್ತೆ, ವಾಲ್ಮೀಕಿ ರಸ್ತೆ ಹಾಗೂ ವೀರಭದ್ರೇಶ್ವರ ದೇವಸ್ಥಾನದ ರಸ್ತೆ ಅಗಲೀಕರಣ ಕಾಮಗಾರಿಯ ಜೊತೆಗೆ ಹೊನ್ನಾಳಿ -ನ್ಯಾಮತಿ ಅವಳಿ ತಾಲ್ಲೂಕಿನ ಅಲಂಕಾರಿಕ ವಿದ್ಯುತ್ ದೀಪಗಳ ಅಳವಡಿಕೆ ಕಾಮಗಾರಿ ಮಾಡಲಾಗುತ್ತಿದೆ.

ನಾನು ಅನುದಾನ ತಂದು ಕೆಲಸ ಹಾಕಿಸಿದರೆ ಸರಿಯಾಗಿ ಕಾಮಗಾರಿಯಾಗುತ್ತಿಲ್ಲಾ ಅಂದರೇ ಏನರ್ಥ. ಕೂಡಲೇ ಗುತ್ತಿಗೆದಾರ ನಿಗದಿತ ಸಮಯದ ಒಳಗಾಗಿ ಗುಣಮಟ್ಟದ ಕಾಮಗಾರಿ ಮುಗಿಸಿ ಜನರಿಗೆ ಅನುಕೂಲ ಮಾಡಿಕೊಡುವಂತೆ ರೇಣುಕಾಚಾರ್ಯ ಸೂಚನೆ ನೀಡಿದರು.

**ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ಸೂಚನೆ :** ಸಾರ್ವಜನಿಕರಿಂದ ಸಾಲು ಸಾಲು ದೂರು ಬಂದ ಹಿನ್ನೆಲೆಯಲ್ಲಿ ನ್ಯಾಮತಿ ಪಟ್ಟಣದ ಕುಂಬಾರ್ ಬೀದಿಗೆ ಭೇಟಿ ನೀಡಿದ ರೇಣುಕಾಚಾರ್ಯ ಅಧಿಕಾರಿಗಳಿಗೆ ಫೋನ್ ಮಾಡಿ ಗುತ್ತಿಗೆದಾರ ಹಾಗೂ ಸಂಬಂಧ ಪಟ್ಟ ಇಲಾಖೆಯ ಎಂಡಿ, ಸಿಇಓ ಶನಿವಾರ ಬೆಳಗ್ಗೆ 10.30 ಕ್ಕೆ ಸ್ಥಳಕ್ಕೆ ಬರುವಂತೆ ಸೂಚನೆ ನೀಡಿದರು.

ಒಂದು ವೇಳೆ ಗುತ್ತಿಗೆದಾರ ಸ್ಥಳಕ್ಕೆ ಬಾರದೇ ಇದ್ದರೆ ಆತನನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ರೇಣುಕಾಚಾರ್ಯ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ರೇಣುಕಾ, ತಾ.ಪಂ. ಮಾಜಿ ಅಧ್ಯಕ್ಷ ರವಿಕುಮಾರ್, ಮುಖಂಡರಾದ ಸಿ.ಕೆ. ರವಿಕುಮಾರ್ ಸೇರಿದಂತೆ ಕುಂಬಾರ್ ಬೀದಿಯ ನಿವಾಸಿಗಳು ಹಾಗೂ ಅಧಿಕಾರಿಗಳಿದ್ದರು.

## ಚುನಾವಣೆ : 28-37ನೇ ವಾರ್ಡ್ ಕಾಂಗ್ರೆಸ್ ಸಭೆ




ದಾವಣಗೆರೆ, ಮೇ 5- ಮಹಾನಗರ ಪಾಲಿಕೆಯ 28 ಮತ್ತು 37ನೇ ವಾರ್ಡ್‌ಗಳಿಗೆ ಇದೇ ದಿನಾಂಕ 20ರಂದು ಉಪಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಇಂದು ಸಂಜೆ ಆಕಾಂಕ್ಷಿಗಳು, ಸ್ಥಳೀಯ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್, ಮುಖಂಡ ಗಣೇಶ್ ಹುಲ್ಲುಮನಿ ಮಾತನಾಡಿ, ಪಕ್ಷ ಯಾರೇ ಅಭ್ಯರ್ಥಿಗಳನ್ನು ಸೂಚಿಸಿದರೂ ಅವರಿಗೆ ಬೆಂಬಲವಾಗಿ ಚುನಾವಣೆ ಎದುರಿಸಬೇಕೆಂದು ಕರೆ ನೀಡಿದರು.

ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಸೂಚಿಸುವ ಅಭ್ಯರ್ಥಿ ಪರ ಒಮ್ಮತದಿಂದ ಚುನಾವಣೆ ನಡಸಲಾಗುವುದು ಎಂದು ಅವರು ತಿಳಿಸಿದರು.

ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಉದಯಕುಮಾರ್, ಸದಸ್ಯ ಅಬ್ದುಲ್ ಲತೀಫ್, ಕೋಳಿ ಇಬ್ರಾಹಿಂ ಮತ್ತು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಅಕ್ರಮ ಖಂಡಿಸಿ ಪ್ರತಿಭಟನೆ




ದಾವಣಗೆರೆ, ಮೇ 5- ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆಯುತ್ತಿರುವುದು ವಿಪರ್ಯಾಸ ಮತ್ತು ಇದನ್ನು ಅಭಾವಿಪ ಅತಿ ಕಟುವಾಗಿ ಖಂಡಿಸಿದೆ.

ಇದರಿಂದಾಗಿ ಬಡ ಮತ್ತು ಪ್ರತಿಭಾವಂತ ನಿರುದ್ಯೋಗಿಗಳ ಕನಸಿಗೆ ತಣ್ಣೀರೆರಚಿದಂತೆ ಅಷ್ಟೇ ಅಲ್ಲದೇ ಅನ್ಯಾಯ ಎಸಗಿದಂತೆಯೂ ಆಗುತ್ತದೆ.

ಇತ್ತೀಚಿನ ಕೆಲ ವರ್ಷಗಳಲ್ಲಿ ಈ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾರೀ ಅಕ್ರಮ ಭ್ರಷ್ಟಾಚಾರ ನಡೆಯುತ್ತಿರುವುದು ವಿದ್ಯಾವಂತ ನಿರುದ್ಯೋಗಿಗಳನ್ನು ತೀವ್ರ ಹತಾಶರನ್ನಾಗಿಸಿದೆ. ಬಹುತೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮಗಳು ರಾಜಾರೋಷವಾಗಿ ನಡೆಯುತ್ತಿದ್ದು, ಈ ಪರೀಕ್ಷೆಗಳ ನೈಜ ಉದ್ದೇಶವನ್ನೇ ಬುಡಮೇಲು ಮಾಡಿವೆ. ಆಡಳಿತ ವ್ಯವಸ್ಥೆ, ರಾಜಕೀಯ ನಾಯಕರು, ಉನ್ನತ ಅಧಿಕಾರಿಗಳೂ ಈ ಅಕ್ರಮಗಳಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಭಾಗಿಯಾಗಿರುವುದು ಕೂಡ ಕಂಡುಬರುತ್ತಿರುವುದು ಖಂಡನೀಯ.

ಪಿಎಸ್ಐ, ಸಹಾಯಕ ಪ್ರಾಧ್ಯಾಪಕರ ಮತ್ತು ಇನ್ನುಳಿದ ಹುದ್ದೆಗಳ ನೇಮಕಾತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕಾನೂನು ನಿಯಮಾವಳಿಗಳ ಅನುಸಾರ ನ್ಯಾಯಯುತವಾಗಿ, ಪಾರದರ್ಶಕವಾಗಿ ನಡೆದಲ್ಲಿ ಮಾತ್ರ ಅದಕ್ಕೊಂದು ಗೌರವ, ಘನತೆ ಇರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ನಡೆಸಲಾಗುವ ಪರೀಕ್ಷೆಗಳಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ತಪ್ಪಿತಸ್ಥರು ಎಷ್ಟೇ ದೊಡ್ಡವಾರಗಿರಲಿ, ಎಷ್ಟೇ ಪ್ರಭಾವಶಾಲಿಯಾಗಿರಲಿ ಅವರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮವಹಿಸಲು ಅಭಾವಿಪ ಸರ್ಕಾರಕ್ಕೆ ಆಗ್ರಹಿಸಿ, ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಂಜುನಾಥ ಕೊಳ್ಳೇರ, ರಾಜ್ಯ ಕಾರ್ಯಕಾರಿಣಿ ಸದಸ್ಯ ಅವಿನಾಶ್, ನಗರ ಕಾರ್ಯದರ್ಶಿ ನರೇಂದ್ರ, ಜಿಲ್ಲಾ ಪ್ರಮುಖ ಶಶಾಂಕ್, ನಗರ ಪ್ರಮುಖ ಮೋಹಿತ್, ಕೊಟ್ರೇಶ್, ದೊಡ್ಡೇಶ್, ಆದರ್ಶ ಇನ್ನಿತರರು ಉಪಸ್ಥಿತರಿದ್ದರು.

## ಮೂರು-ತಲೆಮಾರು ಒಂದೇ ಪೋಸ್ಟರ್

ದಾವಣಗೆರೆ, ಮೇ 5- ವಂಶಪಾರಂಪರ್ಯ ಆಡಳಿತವನ್ನು ವಿರೋಧಿಸುವ ರಾಜಕೀಯ ನಾಯಕರುಗಳು ಇರುವ ಸಮಾಜದ ನಡುವೆ ಒಂದೇ ಕುಟುಂಬದ



ಮೂರು ತಲೆಮಾರಿನ ಜನರ ಭಾವಚಿತ್ರವಿರುವ ಪೋಸ್ಟರ್ ಅನ್ನು ವಿನಾಯಕ ಬಡಾವಣೆಯ ಶುದ್ಧ ನೀರಿನ ಘಟಕದಲ್ಲಿ ಇರುವುದು ಮಾತ್ರ ವಿಶೇಷ.

ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್, ಮಹಾನಗರ ಪಾಲಿಕೆ ಸದಸ್ಯರಾದ ವೀಣಾ ನಂಜಪ್ಪ ಹಾಗೂ ಅವರ ಪುತ್ರನ ಭಾವಚಿತ್ರವಿದ್ದ ಇದು ಖಾಸಗಿ ನೀರಿನ ಘಟಕವೋ ಅಥವಾ ಸರ್ಕಾರದ ಶುದ್ಧ ನೀರಿನ ಘಟಕವೋ ಎಂಬ ಅನುಮಾನ ಸಾರ್ವಜನಿಕರಲ್ಲಿ ಕಾಡುತ್ತಿದೆ. ಶಾಸಕರ ಮೊಮ್ಮಗನ ಭಾವಚಿತ್ರವಿದ್ದು, ಆತನ ಹುದ್ದೆ ಏನು ಎಂಬುದೇ ಸಾರ್ವಜನಿಕರಿಗೆ ಯಕ್ಷಪ್ರಶ್ನೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳೇ ಇದಕ್ಕೆ ಉತ್ತರಸಬೇಕಾಗಿದ್ದು, ಇನ್ನು ವಂಶಪಾರಂಪರ್ಯವನ್ನು ವಿರೋಧಿಸುವ ಶಾಸಕರ ಪ್ರತಿಕ್ರಿಯೆಗಾಗಿ ಸಾರ್ವಜನಿಕರು ಕಾಯುತ್ತಿದ್ದಾರೆ ಎಂದು ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಅಧ್ಯಕ್ಷ ಹರೀಶ್ ಬಸಾಪುರ ತಿಳಿಸಿದ್ದಾರೆ.

## ಡಕಾಯಿತಿ : ಮೂವರ ಬಂಧನ

ದಾವಣಗೆರೆ, ಮೇ 5- ಬೆಂಗಳೂರಿನ ವ್ಯಕ್ತಿಯೋರ್ವರಿಗೆ ಅಸಲಿ ಎಂದು ನಂಬಿಸಿ ನಕಲಿ ಬಂಗಾರ ನೀಡಿ ನಗದು ಪಡೆದು ಹಲ್ಲೆ ನಡೆಸಿ ದರೋಡೆ ಮಾಡಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಸಂತೇಬೆನ್ನೂರು ಪೊಲೀಸರು 1.65 ಲಕ್ಷ ರೂ. ನಗದು ಮತ್ತು ಒಂದು ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದಾರೆ.

ಸಂತೇಬೆನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಚಿಕ್ಕಬ್ಬಿಗೆರೆ ಗ್ರಾಮದ ಜಮೀನಿನ ಬಳಿ ಬಂಧಿತ ಆರೋಪಿಗಳು ತಮ್ಮ ಮನೆಯ ಪಾಯವನ್ನು ತೆಗೆಯುವಾಗ ಅಸಲಿ ಬಂಗಾರ ಸಿಕ್ಕಿರುವುದಾಗಿ ಬೆಂಗಳೂರು ವಾಸಿ ಸುರೇಶ ಎಂಬುವವರಿಗೆ ನಂಬಿಸಿ 2 ಲಕ್ಷ ರೂ. ನಗದು ಹಣ ಪಡೆದುಕೊಂಡು ನಕಲಿ ಬಂಗಾರವನ್ನು ನೀಡಿ, ಹಲ್ಲೆ ನಡೆಸಿ ಒಂದು ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು.

ಸಂತೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಈ ಪ್ರಕರಣವನ್ನು ಚನ್ನಗಿರಿ ಉಪವಿಭಾಗದ ಡಿವೈಎಸ್‌ಪಿ ಕೆ.ಎಂ. ಸಂತೋಷ್ ಮಾರ್ಗದರ್ಶನದಲ್ಲಿ ಸಂತೇಬೆನ್ನೂರು ವೃತ್ತದ ಸಿಪಿಐ ಮಹೇಶ್ ನೇತೃತ್ವದಲ್ಲಿ ಸಂತೇಬೆನ್ನೂರು ಪಿಎಸ್‌ಐ ಶಿವರುದ್ರಪ್ಪ ಎಸ್.ಮೇಟಿ ಹಾಗೂ ಸಿಬ್ಬಂದಿಗಳಾದ ಮೈಲಾರಪ್ಪ, ವಿ.ಟಿ. ಉಮೇಶ್, ಕೊಟ್ರೇಶ್ ಒಳಗೊಂಡ ತಂಡವು ಭೇದಿಸಿದೆ.

ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಎಸ್ಪಿ ಸಿ.ಬಿ. ರಿಷ್ಯಂತ್ ಮತ್ತು ಎಎಸ್ಪಿ ಆರ್.ಬಿ. ಬಸರಗಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಧುಲಿಯ, ಪರ್ಡಿವಾಲ ಹೆಸರುಗಳ ಶಿಫಾರಸ್ಸು

ನವದೆಹಲಿ, ಮೇ 5 – ಗುವಾಹತಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಧಾಂಶು ಧುಲಿಯ ಹಾಗೂ ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ಜಮ್‌ಷೆಡ್ ಬಿ. ಪರ್ಡಿವಾಲ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಪದೋನ್ನತಿ ನೀಡುವಂತೆ ಸುಪ್ರೀಂ ಕೋರ್ಟ್ ಕೊಲೀಜಿಯಂ ಶಿಫಾರಸ್ಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರಾಖಂಡ ಹೈಕೋರ್ಟ್‌ನಿಂದ ಸುಪ್ರೀಂ ಕೋರ್ಟ್‌ಗೆ ಬಡ್ತಿ ಪಡೆಯಲಿರುವ ಎರಡನೇ ನ್ಯಾಯ ಮೂರ್ತಿ ಧುಲಿಯಾ ಆಗಲಿದ್ದಾರೆ. ನ್ಯಾಯಮೂರ್ತಿ ಪರ್ಡಿವಾಲಾ ಅವರು ಸರ್ವೋನ್ನತ ನ್ಯಾಯಾಲಯಕ್ಕೆ ಕಾಲಿಡಲಿರುವ ನಾಲ್ಕನೇ ಪಾರ್ಸಿ ಆಗಲಿದ್ದಾರೆ.

## ಬಂಜಾರ ರಕ್ಷಣಾ ವೇದಿಕೆಯಿಂದ ಬಸವರಾಜನಾಯ್ಕ, ಅರುಣ್ ಉಚ್ಚಾಟನೆ

ದಾವಣಗೆರೆ, ಮೇ 5- ಕರ್ನಾಟಕ ಬಂಜಾರ ರಕ್ಷಣಾ ವೇದಿಕೆಯಿಂದ ಪ್ರಧಾನ ಕಾರ್ಯದರ್ಶಿ ಎನ್. ಅರುಣ್, ಕಾರ್ಯಾಧ್ಯಕ್ಷ ಬಸವರಾಜ ನಾಯ್ಕ ಹಾಗೂ ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿ ಎನ್. ಪುನೀತ್ ಕುಮಾರ್ ಅವರನ್ನು ಉಚ್ಚಾಟನೆ ಮಾಡಿರುವುದಾಗಿ ಸಂಘಟನೆಯ ರಾಜ್ಯಾಧ್ಯಕ್ಷ ಕೆ.ಡಿ. ನಾಯ್ಕ ತಿಳಿಸಿದ್ದಾರೆ.

ಸಂಘಟನೆಯ ಚಟುವಟಿಕೆಗಳ ಲೆಕ್ಕ ಕೊಡದ ಹಾಗೂ ಸಂಘಟನೆಗಾಗಿ ಕೆಲಸ ಮಾಡದ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಮೂವರೂ ದಾವಣಗೆರೆ ಜಿಲ್ಲೆಯವರು ಎಂದವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಸಂಘಟನೆಯ ಪಿ. ಲಚ್ಚೂ ನಾಯ್ಕ, ರೇವಣ್ಣ ನಾಯ್ಕ ಹಾಗೂ ಲೋಹಿತ್ ನಾಯ್ಕ ಉಪಸ್ಥಿತರಿದ್ದರು.

## ಜೈನ್ ಕಾಲೇಜಿಗೆ ಫಲಿತಾಂಶ

ದಾವಣಗೆರೆ, ಮೇ 5- ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ ಹೊರಡಿಸಿರುವ 2021-22ನೇ ಸಾಲಿನ ಏಳನೇ ಸೆಮಿಸ್ಟರ್ ಫಲಿತಾಂಶದಲ್ಲಿ ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ಸರಾಸರಿ ಶೇ. 92.19 ಫಲಿತಾಂಶ ಪಡೆದಿದೆ ಎಂದು ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್ ತಿಳಿಸಿದ್ದಾರೆ. ಸಿವಿಲ್ ವಿಭಾಗವು 95.70%, ಕಂಪ್ಯೂಟರ್ ಸೈನ್ಸ್ ವಿಭಾಗವು 95.38%, ಮೆಕ್ಯಾನಿಕಲ್ ವಿಭಾಗವು 93.10%, ಎಲೆಕ್ಟ್ರಾನಿಕ್ಸ್ ವಿಭಾಗವು 91.93%, ಎಲೆಕ್ಟ್ರಿಕಲ್ ವಿಭಾಗವು 84.84% ಫಲಿತಾಂಶವನ್ನು ಪಡೆದಿವೆ. ಕಾಲೇಜಿನ ಮೊದಲ ಮೂರು ಸ್ಥಾನವನ್ನು ಕ್ರಮವಾಗಿ ರಚನಾ ಪಿ. ಎನ್.(90.37%), ಮೊಹಮ್ಮದ್ ಶೋಯಬ್ ಎಂ. (88.25%), ಜೀವಿತ ಪಿ. (87.62%) ಪಡೆದಿರುತ್ತಾರೆ.

## ಉಜ್ಜಯಿನಿ ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ಮಹಾರಥೋತ್ಸವ ಇಂದು

ಕೊಟ್ಟೂರು ತಾಲ್ಲೂಕು ಉಜ್ಜಯಿನಿ ಸುಕ್ಷೇತ್ರದಲ್ಲಿ ಶ್ರೀ ಮರುಳ ಸಿದ್ಧೇಶ್ವರರ ಮಹಾ ರಥೋತ್ಸವ ಇಂದು ನಡೆಯಲಿದೆ. ನಾಳೆ ಶನಿವಾರ ಸಂಜೆ 4 ಕ್ಕೆ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ದೇವಾಲಯದ ಗೋಪುರದ ಶಿಖರಕ್ಕೆ ತೈಲಾಭಿಷೇಕವನ್ನು ನೆರವೇರಿಸಲಾಗುವುದು.

ನಾಡಿದ್ದು ಭಾನುವಾರ ಜಂಗಮ ವಟುಗಳಿಗೆ ಹಾಗೂ ವೀರಶೈವ ಧರ್ಮ ಸಂಸ್ಕೃತಿ ಪ್ರಚಾರ ಮಾಡುವ ವೀರಮಾಹೇಶ್ವರರಿಗೆ ನಾಡಿನ ಹರ ಗುರು ಚರ ಮೂರ್ತಿಗಳ ಸಮ್ಮುಖದಲ್ಲಿ ಶಿವಾಚಾರ್ಯರ ನೇತೃತ್ವದಲ್ಲಿ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮ ಮತ್ತು ಧರ್ಮೋಪದೇಶ ಮಾಡಲಾಗುವುದು.

ಇದೇ ದಿನಾಂಕ 10 ರಂದು ಶ್ರೀ ಮರುಳಸಿದ್ದೇಶ್ವರ ಸ್ವಾಮಿಗೆ ಆಪ್ರುವಣೆ ನೀಡುವ ಮುಖೇನ ಕಂಕಣ ವಿಸರ್ಜನೆ ಹಾಗೂ ದೇವಾಲಯ ಶುದ್ಧೀಕರಣ ಮಾಡಲಾಗುವುದು.

**ಆಸ್ಪತ್ರೆಯಲ್ಲಿ ವೈದ್ಯರು ಲಭ್ಯ**

**ಡಾ|| ಜಿ.ಸಿ. ಬಸವರಾಜ್,** ಕೀಲು-ಮೂಳೆ ತಜ್ಞರು

ಭೇಟಿ ಸಮಯ : ಸೋಮವಾರದಿಂದ ಶನಿವಾರದವರೆಗೆ
ಪ್ರತಿದಿನ ಮಧ್ಯಾಹ್ನ 1.00 ರಿಂದ 3.00 ರವರೆಗೆ
ಸಂಜೆ 6.30 ರಿಂದ ರಾತ್ರಿ 8.30 ರವರೆಗೆ.
ಭಾನುವಾರ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00ರವರೆಗೆ

**ಶಿಲ್ಪ ಡಯಾಗ್ನೋಸ್ಟಿಕ್ಸ್ ಅಂಡ್ ಪ್ರೈ. ಲಿಮಿಟೆಡ್**
ಸ್ವಿಮ್ಮಿಂಗ್ ಪೂಲ್ ಹತ್ತಿರ, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.
ಫೋ : 95353 53872

## ನಟರಾಜ್‌ಗೆ ಪಿಹೆಚ್‌ಡಿ



ದಾವಣಗೆರೆ, ಮೇ 5- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಿ.ಆರ್. ನಟರಾಜ್ ಅವರು, ರಾಜ್ಯದ ಕಬ್ಬು ಬೆಳೆಗಾರರು ಎದುರಿಸುತ್ತಿರುವ ಉತ್ಪಾದನೆ ಮತ್ತು ಮಾರುಕಟ್ಟೆ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ, ಪ್ರೌಢ ಪ್ರಬಂಧ ಸಲ್ಲಿಸಿದ್ದು, ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯವು ಪಿಹೆಚ್‌ಡಿ ಪದವಿ ಪ್ರಕಟಿಸಿದೆ. ಪ್ರೊ. ಎನ್.ಕೆ. ಗೌಡ ಅವರು ಗೈಡ್ ಆಗಿ ಮಾರ್ಗದರ್ಶನ ನೀಡಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ನಗರ ಬಿ ಬ್ಲಾಕ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಕೆಟಿಜೆ ನಗರ ಶಾಖೆ-2ನ ಡಿಸಿಎಂ ಟೌನ್‌ಶಿಪ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಆಂಜನೇಯ ಬಡಾವಣೆ ಶಾಖೆ-3: ವಿದ್ಯಾನಗರ ಮುಖ್ಯರಸ್ತೆಯಿಂದ ಕೊನೆಯ ಬಸ್‌ನಿಲ್ದಾಣ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಆಂಜನೇಯ ಬಡಾವಣೆ ಶಾಖೆ-4 ಎಸ್.ಎಸ್ ಲೇಔಟ್ 'ಎ' ಬ್ಲಾಕ್, ಇಂಡೋರ್ ಸ್ಟೇಡಿಯಂ ಎದುರು ಬಸವನಗುಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಪಿ.ಜೆ ಬಡಾವಣೆ ಶಾಖೆ-5 ಎಂ.ಸಿ.ಸಿ 'ಎ' ಬ್ಲಾಕ್, 3 ಮತ್ತು 4ನೇಯ ಮುಖ್ಯರಸ್ತೆ, ರೇಣು-ಅಕ್ವೇರಿಯಂ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಪಿ.ಜೆ ಬಡಾವಣೆ ಶಾಖೆ-6ರ ವ್ಯಾಪ್ತಿಯ ಚಿಗಟೇರಿ ಲೇಔಟ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**

**ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ /ಯುವತಿಯರು ಬೇಕಾಗಿದ್ದಾರೆ.**

**Mediworld Pharma**
**C/o AKP Healthcare Pvt. Ltd**
Hadadi Rd, opp. Taralabalu school,
Shrinivaasa Nagara, Davanagere, Karnataka 577005
Mob: 93531 57441

# ಓಲ್ಡ್ ಪಿ.ಬಿ. ರೋಡ್ - ಎ ಜರ್ನಿ ಟುವರ್ಡ್ಸ್ ಡೆತ್

**ಓದುಗರ ಪತ್ರ**

ಸ್ನೇಹಿತರೇ, ಒಂದು ವೇಳೆ ನೀವು ಹಳೇ ಪಿ.ಬಿ. ರಸ್ತೆ, ದೇವರಾಜ್ ಅರಸ್ ಬಡಾವಣೆಯಿಂದ ದೊಡ್ಡಬಾತಿ ಕಡೆಗೆ ವಾಹನ ಪ್ರಯಾಣ ಮಾಡಬಯಸಿದ್ದಲ್ಲಿ ತಮ್ಮ ಮನೆಯವರಿಗೋ ಅಥವಾ ತಮ್ಮ ಮೊಬೈಲ್‌ನ ವಾಟ್ಸಾಪ್ ಗ್ರೂಪ್‌ನಲ್ಲಿ ಒಂದು ಸಂದೇಶ ಕೊಟ್ಟರೆ ಉತ್ತಮ.

ಹೌದು ಸ್ನೇಹಿತರೇ ವೇಗವಾಗಿ ಬೆಳೆಯುತ್ತಿರುವ ದಾವಣಗೆರೆ ನಗರದಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟು ಕೈಲಾಸ ಸೇರುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಕಳೆದ ಕೆಲವು ದಿನಗಳಲ್ಲಿ ಇದೇ ರಸ್ತೆಯಲ್ಲಿ ಸಂಚರಿಸಿ ಅಪಘಾತ ಸಂಭವವಿಸಿ ಕೆಲವರು ತಮ್ಮ ಹೆತ್ತವರನ್ನು, ಅಕ್ಕ-ತಂಗಿಯರನ್ನು, ಅಣ್ಣ-ತಮ್ಮಂದಿರನ್ನು ಅಪಘಾತದಲ್ಲಿ ಕಳೆದುಕೊಂಡಿರುತ್ತಾರೆ.

ಎರಡು ವಾರದ ಹಿಂದೆ ಗುರುವಾರದಂದು ನಂದಿನಿ ಡೈರಿ ಎದುರುಗಡೆ ವ್ಯಕ್ತಿಯು ಅಪಘಾತಕ್ಕೀಡಾಗಿ ವ್ಯಕ್ತಿಯೊಬ್ಬರು ತಮ್ಮ ಅಮೂಲ್ಯ ಜೀವ ಕಳೆದುಕೊಂಡರು. 5.5.2022 ರ ಗುರುವಾರದಂದು ಕೆಎಸ್‌ಆರ್‌ಟಿಸಿ ಬಸ್ ಹಾಗೂ ಕಾರಿನ ನಡುವೆ ಡಿಸಿ ಆಫೀಸಿನ ಎದುರಿಗೆ ರಸ್ತೆ ಅಪಘಾತ ಸಂಭವಿಸಿದೆ. ನಗರ ವ್ಯಾಪ್ತಿಯಲ್ಲಿರುವ ಈ ರಸ್ತೆಯಲ್ಲಿ ಘನವಾಹನಗಳ ಚಾಲಕರು ಅತಿಯಾದ ವೇಗ ಮತ್ತು ಅಜಾಗರೂಕತೆಯಿಂದ ತಮ್ಮ ವಾಹನಗಳನ್ನು ಚಲಿಸಿ ಅಮಾಯಕರ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ.

ಈ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ, ಬ್ಯಾರಿಕೇಡ್‌ಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ವೇಗಮಾಪಕ ಯಂತ್ರಗಳನ್ನು ಬಳಸಿಕೊಂಡು ಅತಿವೇಗದಿಂದ ಬರುವ ವಾಹನ ಚಾಲಕರಿಗೆ ದಂಡ ವಿಧಿಸುತ್ತಿಲ್ಲ, ದ್ವಿ-ಚಕ್ರ ವಾಹನ ಸವಾರರು ಮೊಬೈಲ್‌ನಲ್ಲಿ ಮಾತನಾಡುತ್ತಲೇ ಫ್ಯಾಷನ್‌ಗಾಗಿ ಜೀವದ ಭಯವಿಲ್ಲದೇ ಸವಾರಿ ಮಾಡುತ್ತಿರುತ್ತಾರೆ. ಬೇರೆಯವರ ಅಜಾಗರೂಕತೆಯಿಂದ ನಿಯತ್ತಾಗಿ ಸವಾರಿ ಮಾಡುತ್ತಿರುವವರು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.


ಇನ್ನೊಂದು ವಿಷಯವೇನೆಂದರೆ ವೇರ್‌ಹೌಸ್, ಗೋಡಾನ್‌ಗಳು ಬಾರಿ ಹತ್ತಿರವಿರುವುದರಿಂದ ಲಾರಿ ಚಾಲಕರು ಸ್ಪರ್ಧಾತ್ಮಕ ವೇಗದಿಂದ ವಾಹನ ಚಲಿಸಿ ಹೆಚ್ಚಿನ ಲಾಭದ ಆಸೆಗಾಗಿ ಅಮಾಯಕರ ಜೀವಕ್ಕೆ ಸಂಚಕಾರ ತಂದಿರುತ್ತಾರೆ.

ಬಾತಿ ಕೆರೆಯಿಂದ ದೊಡ್ಡಬಾತಿ ಕಡೆ ಹೋಗುವ ದಾರಿಯ ನಂದಿನಿ ಹಾಲಿನ ಡೈರಿ ಹತ್ತಿರದ ರಸ್ತೆ ಕಿರಿದಾಗಿದ್ದು, ಎಡಗಡೆ ವಾಹನಗಳ ಸರ್ವೀಸ್ ಸ್ಟೇಷನ್‌ಗಳು ಸಾಲು ಸಾಲಾಗಿರುತ್ತವೆ ಮತ್ತು ರಸ್ತೆ ತಿರುವಿದ್ದರೂ ಅವೈಜ್ಞಾನಿಕತೆಯಿಂದ ಕೂಡಿರುತ್ತದೆ. ಇಲ್ಲಿ ಹೆಚ್ಚಿನ ಸುರಕ್ಷತೆಯ ಅಗತ್ಯವಿರುತ್ತದೆ.

ದಾವಣಗೆರೆ ಸಿಟಿಯೇನೋ ಸ್ಮಾರ್ಟಾಗುತ್ತಿದೆ, ಸಂಬಂಧಪಟ್ಟ ಅಧಿಕಾರಿಗಳು ತಡಮಾಡದೇ ಸ್ಮಾರ್ಟಾಗಿ ತಮ್ಮ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿದರೆ, ಜನರ ಜೀವ ಉಳಿಸಬಹುದು. ಈ ಸಾವಿನ ರಸ್ತೆಯಲ್ಲಿ ನಿಮ್ಮ ಮನೆಯ ಸದಸ್ಯರೋ ಅಥವಾ ನಿಮ್ಮ ಬಂಧುಗಳೋ ಪ್ರಯಾಣಿಸುತ್ತಿರಬಹುದು... ಒಮ್ಮೆ ಯೋಚಿಸಿ....

**- ಶಶಿಧರ್ ಸಿ.**
95615 89811

## ನಗರದಲ್ಲಿ ಇಂದು ಶಂಕರ ಜಯಂತಿ



ಶಂಕರ ಜಯಂತಿ ಪ್ರಯುಕ್ತ ಜಯದೇವ ವೃತ್ತದ ಕೂಡಲೀ ಶಂಕರ ಮಠದಲ್ಲಿ ಶ್ರೀ ಇಂದು ಮಧ್ಯಾಹ್ನ 12.30 ಕ್ಕೆ ಮಠದ ಆವರಣದಲ್ಲಿ ಪಲ್ಲಕ್ಕಿ ಉತ್ಸವವಿರುತ್ತದೆ ಎಂದು ಮಠದ ಅರ್ಚಕ ಪವನ್ ಭಟ್ ತಿಳಿಸಿದ್ದಾರೆ.

**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**

ನಗರದ B.I.E.T ರಸ್ತೆ,
ಹೇಮಾವತಿ ಹಾಸ್ಟೆಲ್ ಎದುರು
**ಒಟ್ಟು 3200 ಅಡಿ** ಇರುವ
ಕಾರ್ನರ್ ಸೈಟು ಮಾರಾಟಕ್ಕಿದೆ.
**ಆಸಕ್ತರು ನೇರವಾಗಿ ಸಂಪರ್ಕಿಸಿ :**
Mohan Real Estate Agency
97424 34049

**ಸಾರ್ವಜನಿಕ ಪ್ರಕಟಣೆಗಾಗಿ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೊಡ್ಡಬಾತಿ ಗ್ರಾಮದ ರಿ.ಸರ್ವೇ ನಂ. 57/1 ವಿಸ್ತೀರ್ಣ ಎಕರೆ 4, ಗುಂಟೆ 3ವುಳ್ಳ ಪೂರಾ ಜಮೀನು (1) ಕೊಟ್ರಮ್ಮ ಕೋಂ ಲೇಟ್ ರೇವಣಸಿದ್ದಪ್ಪ (2) ಪಾರಮ್ಮ ಕೋಂ ಲೇಟ್ ಪ್ರಕಾಶಪ್ಪ, ರಂಜಿತ ಬಿನ್ ಲೇಟ್ ಪ್ರಕಾಶಪ್ಪ, ರಘು ಬಿನ್ ಲೇಟ್ ಪ್ರಕಾಶಪ್ಪ, (3) ಶಕುಂತಲಾ ಕೋಂ ಲೇಟ್ ಸುರೇಶಪ್ಪ, ಕುಮಾರ ಬಿನ್ ಲೇಟ್ ಸುರೇಶಪ್ಪ, ಮಂಗಳ ಬಿನ್ ಲೇಟ್ ಸುರೇಶಪ್ಪ, (4) ಸಿದ್ದಪ್ಪ ಬಿನ್ ಲೇಟ್ ಬಸಪ್ಪ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು ಇವರುಗಳ ಹೆಸರಿನಲ್ಲಿ ಖಾತೆ ಇದ್ದು, ಸದರಿಯವರ ಹಕ್ಕುದಾರಿ ಹಾಗೂ ಸ್ವಾಧೀನಾನುಭವದಲ್ಲಿರುವ ಸೊತ್ತಾಗಿರುತ್ತದೆ. ಸದರಿ ಮೇಲ್ಕಂಡ ಜಮೀನನ್ನು ನಾನು ಕ್ರಯಕ್ಕೆ ಪಡೆಯುವ ಉದ್ದೇಶವನ್ನು ಹೊಂದಿರುತ್ತೇನೆ. ಈ ಬಗ್ಗೆ ಯಾರದಾದರೂ ತಂಟೆ, ತಕರಾರು, ಆಕ್ಷೇಪಣೆಗಳು, ಹಕ್ಕುಬಾಧ್ಯತೆಗಳು ಹಾಗೂ ಹೊಣೆಗಾರಿಕೆಗಳು ಇದ್ದಲ್ಲಿ ಈ ದಿನಾಂಕದಿಂದ ಎಂಟು (8) ದಿವಸಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ. ಆ ನಂತರ ಬರುವ ಯಾವುದೇ ವಿಧವಾದ ತಂಟೆ, ತಕರಾರು, ಹಕ್ಕುಬಾಧ್ಯತೆ ಹಾಗೂ ವಗೈರೆಗಳಿಗೆ ಯಾವುದೇ ಅನ್ವಯವಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುತ್ತೇನೆ ಹಾಗೂ ವಿನಂತಿಸಿಕೊಳ್ಳುತ್ತೇನೆ.

ಸಹಿ/-
**ಹೆಚ್. ಜಯಣ್ಣ ತುಂಬಿಗೆರೆ**
ಹೋಟೆಲ್ ಸಾಯಿ ಇಂಟರ್‌ನ್ಯಾಷನಲ್
ಹಿಂಭಾಗ, ಪಿ.ಬಿ ರಸ್ತೆ, ದಾವಣಗೆರೆ.
ಮೊ : 90367 42295

ಸ್ಥಳ : ದಾವಣಗೆರೆ
ದಿನಾಂಕ : 5.5.2022



**ಹೊನ್ನಾಳಿಯಲ್ಲಿ ಎತ್ತುಗಳ ಮೆರವಣಿಗೆ** ವಿಶ್ವಗುರು ಶ್ರೀ ಬಸವೇಶ್ವರ ಜಯಂತ್ಯೋತ್ಸವ ಸಮಾರಂಭದ ಪ್ರಯುಕ್ತ ಅಲಂಕೃತ ಎತ್ತುಗಳ ಮೆರವಣಿಗೆ ನಡೆಸಲಾಯಿತು. ಯುವಕರು - ಮಕ್ಕಳು ಪಟ್ಟಣದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಎತ್ತುಗಳೊಂದಿಗೆ ಸಂಭ್ರಮಿಸಿದರು.

# ಜಿಲ್ಲೆಯ ಗ್ರಾಮ ಪಂಚಾಯ್ತಿಗಳಿಗೆ 20 ರಂದು ಉಪ ಚುನಾವಣೆ

ದಾವಣಗೆರೆ, ಮೇ 5- ಚನ್ನಗಿರಿ, ದಾವಣಗೆರೆ, ಜಗಳೂರು, ಹರಿಹರ ಹಾಗೂ ನ್ಯಾಮತಿ ತಾಲ್ಲೂಕಿನ ಕೆಲ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಹಾಗೂ ತೆರವಾಗಿರುವ ಸದಸ್ಯರ ಸ್ಥಾನಗಳಿಗೆ ಇದೇ ದಿನಾಂಕ 20ರಂದು ಉಪಚುನಾವಣೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

**ಚನ್ನಗಿರಿ ತಾಲ್ಲೂಕು** : ಗ್ರಾಮ ಪಂಚಾಯಿತಿ - ಚಿರಡೋಣಿ, ಕ್ಷೇತ್ರ ಚಿರಡೋಣಿ-3 (ಹಿಂದುಳಿದ ವರ್ಗ(ಅ) ), –ಹೊಸಕೆರೆ ಗ್ರಾಮ ಪಂಚಾಯಿತಿ (ಬಸವಾಪಟ್ಟಣ), ಕ್ಷೇತ್ರ ಹೊಸಕೆರೆ (ಬಸವಾಪಟ್ಟಣ)-1, (ಹಿಂದುಳಿದ ವರ್ಗ ಅ (ಮಹಿಳೆ) ಗ್ರಾಮ ಪಂಚಾಯಿತಿ - ಗೊಪ್ಪೇನಹಳ್ಳಿ, ಕ್ಷೇತ್ರ ಪೆನ್ನಸಮುದ್ರ-3 ಅನುಸೂಚಿತ ಜಾತಿ (ಮಹಿಳೆ).

**ದಾವಣಗೆರೆ ತಾಲ್ಲೂಕು** : ಕಾಡಜ್ಜಿ ಗ್ರಾಪಂ, ಕ್ಷೇತ್ರ ಕಾಡಜ್ಜಿ, (ಅನುಸೂಚಿತ ಜಾತಿ) ಕುಕ್ಕುವಾಡ ಗ್ರಾ.ಪಂ, ಕ್ಷೇತ್ರ ಕುಕ್ಕುವಾಡ (ಹಿಂದುಳಿದ ವರ್ಗ 'ಬ')

ಜಗಳೂರು ತಾಲ್ಲೂಕು, ಬಿದರಕೆರೆ ಗ್ರಾಪಂ, ಕ್ಷೇತ್ರ ಬಿದರಕೆರೆ-1 (ಅನುಸೂಚಿತ ಜಾತಿ) ಕ್ಷೇತ್ರ, ರಸ್ತೆ ಮಾಕುಂಟೆ (ಮ) ಗೊಲ್ಲರಹಟ್ಟಿ(ಸಾಮಾನ್ಯ).

**ಹರಿಹರ ತಾಲ್ಲೂಕು** : ಎಳೆಹೊಳೆ ಗ್ರಾಪಂ, ಕ್ಷೇತ್ರ ಮಳಲಹಳ್ಳಿ (ಅನುಸೂಚಿತ ಪಂಗಡ).

**ನ್ಯಾಮತಿ ತಾಲ್ಲೂಕು:** ಗುಡ್ಡೇಹಳ್ಳಿ ಗ್ರಾಪಂ, ಕ್ಷೇತ್ರ ಜೀನಹಳ್ಳಿ-1, (ಅನುಸೂಚಿತ ಜಾತಿ), ಸಾಮಾನ್ಯ (ಮಹಿಳೆ), ಕ್ಷೇತ್ರ ಜೀನಹಳ್ಳಿ-2 (ಅನುಸೂಚಿತ ಪಂಗಡ (ಮಹಿಳೆ)), (ಸಾಮಾನ್ಯ), (ಸಾಮಾನ್ಯ ಮಹಿಳೆ).

ಇದೇ ದಿನಾಂಕ 10 ರಂದು ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನ. 11 ರಂದು ನಾಮಪತ್ರಗಳನ್ನು ಪರಿಶೀಲಿಸಲು ಕೊನೆಯ ದಿನ. 13 ರಂದು ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ ಎಂದು ಜಿಲ್ಲಾಧಿಕಾರಿಗಳು ವಿವರಿಸಿದ್ದಾರೆ.

## ಪಿಎಸ್ಐ : ಎಫ್.ಐ.ಆರ್. ರದ್ದುಗೊಳಿಸಲು ಹೈಕೋರ್ಟ್‌ಗೆ ಅಭ್ಯರ್ಥಿಗಳ ಮೊರೆ

ಬೆಂಗಳೂರು, ಮೇ 5 – ಪಿ.ಎಸ್.ಐ. ನೇಮಕಾತಿ ಹಗರಣದಲ್ಲಿ ಹೆಸರಿಸಲಾಗಿರುವ ಪರೀಕ್ಷೆ ಬರೆದಿದ್ದ ರಚನಾ ಹನುಮಂತ ಹಾಗೂ ಜಾಗೃತ್ ಸೇರಿದಂತೆ ಹಲವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ತಮ್ಮ ವಿರುದ್ಧದ ಪ್ರಕರಣ ಕೈ ಬಿಡುವಂತೆ ಕೋರಿದ್ದಾರೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ಇವರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ. ಭ್ರಷ್ಟಾಚಾರ ಹಾಗೂ ಕ್ರಮಗಳ ಆರೋಪ ಕೇಳಿ ಬಂದ ನಂತರ ಪಿ.ಎಸ್.ಐ. ನೇಮಕಾತಿ ಪರೀಕ್ಷೆಯನ್ನು ರಾಜ್ಯ ಸರ್ಕಾರ ರದ್ದುಗೊಳಿಸಿತ್ತು. ಹಗರಣಕ್ಕೆ ಸಂಬಂಧಿಸಿದಂತೆ ಪೊಲೀಸರು 30 ಜನರನ್ನು ಬಂಧಿಸಿದ್ದಾರೆ. ಪರೀಕ್ಷೆಗೆ ಹಾಜರಾದ 10 ಅಭ್ಯರ್ಥಿಗಳ ವಿರುದ್ಧವೂ ಎಫ್.ಐ.ಆರ್. ದಾಖಲಿಸಲಾಗಿದೆ. 545 ಪಿ.ಎಸ್.ಐ. ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ ಮಹಿಳಾ ಕೋಟಾದಲ್ಲಿ ರಚನಾ ಮೊದಲ ರ್‍ಯಾಂಕ್ ಪಡೆದಿದ್ದರು.

## ಚನ್ನಗಿರಿ ಪುರಸಭೆಯ ಒಂದು ಸ್ಥಾನಕ್ಕೆ ಉಪ ಚುನಾವಣೆ

ಚನ್ನಗಿರಿ, ಮೇ 5- ಚನ್ನಗಿರಿ ಪುರಸಭೆಯ ವಾರ್ಡ್ ಸಂಖ್ಯೆ 16-ನೂರಾನಿ ಮಸೀದಿ (ಹಿಂದುಳಿದ ವರ್ಗ (ಎ) ಮಹಿಳೆ) ಬಡಾವಣೆಯ ಸ್ಥಾನಕ್ಕೆ ಇದೇ ದಿನಾಂಕ 20ರಂದು ಉಪ ಚುನಾವಣೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ. ಇದೇ ದಿನಾಂಕ 9 ರಂದು ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನ. ಮೇ 10 ರಂದು ನಾಮಪತ್ರಗಳನ್ನು ಪರಿಶೀಲಿಸಲು ಕೊನೆಯ ದಿನ. ಮೇ 12 ರಂದು ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ. ಮೇ 22 ರಂದು ಮತಗಳ ಎಣಿಕೆ ನಡೆಯಲಿದೆ.

## ಹೆಚ್.ಎನ್. ಹರೀಶ್‌ಗೆ ಚಿನ್ನದ ಪದಕ



ಹರಿಹರ, ಮೇ 5 - ಬೆಂಗಳೂರು ವಿಶ್ವ ವಿದ್ಯಾಲಯದ 56ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಹೆಚ್.ಎನ್. ಹರೀಶ್ ಅವರು ಮಾಸ್ಟರ್ ಆಫ್ ಬಿಸಿನೆಸ್ ಆಡ್ಮಿನಿಸ್ಟ್ರೇಷನ್‌ನಲ್ಲಿ ಪ್ರಥಮ ರ್‍ಯಾಂಕ್ ಪಡೆದು 4 ಚಿನ್ನದ ಪದಕಗಳನ್ನು ಪಡೆದಿದ್ದಾರೆ. ನಗರದ ವಿದ್ಯಾನಗರ ವಾಸಿ ಹನುಮಂತಪ್ಪ ಹಾಗೂ ದಿ. ನಾಗರತ್ನ ದಂಪತಿ ಪುತ್ರ.

## ರಾಣೇಬೆನ್ನೂರಿನ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಶಿವಕುಮಾರ್



ರಾಣೇಬೆನ್ನೂರು, ಮೇ 5- ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕಗೊಂಡ ಶಿವಕುಮಾರ ನರಸಗೊಂಡರ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಸಚಿವ ಬಿ.ಸಿ. ಪಾಟೀಲ್, ಶಾಸಕರಾದ ವಿರುಪಾಕ್ಷಪ್ಪ ಬಳ್ಳಾರಿ, ಅರುಣಕುಮಾರ ಪೂಜಾರ, ಮುಖಂಡರಾದ ಪವನ ಮಲ್ಲಾಡದ, ಮಂಗಳಗೌರಿ ಪೂಜಾರ, ಪರಮೇಶ ಗೂಳಣ್ಣನವರ, ಶೇಖಪ್ಪ ನರಸಗೊಂಡರ ಮತ್ತಿತರರು ಉಪಸ್ಥಿತರಿದ್ದು, ಶುಭ ಕೋರಿದರು.

## ನಗರದಲ್ಲಿ ಇಂದು ಬಸವ ಜಯಂತಿ

ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಆಶ್ರಯದಲ್ಲಿ ಜಗಜ್ಯೋತಿ ಬಸವಣ್ಣನವರ 889 ನೇ ಜಯಂತ್ಯೋತ್ಸವವನ್ನು ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ (ಅಕ್ಕಮಹಾದೇವಿ ರಸ್ತೆ) ದಲ್ಲಿ ಇಂದು ಸಂಜೆ 6 ಗಂಟೆಗೆ ಆಚರಿಸಲಾಗುವುದು.

ಅಧ್ಯಕ್ಷತೆಯನ್ನು ಶಿವಕುಮಾರ್ ದೇವರಮನಿ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಮನೂರು ಶಿವಶಂಕರಪ್ಪ, ಈಶ್ವರ್ ಬಿ. ಖಂಡ್ರೆ, ಎಸ್.ಎಸ್. ಗಣೇಶ್, ಅಥಣಿ ವೀರಣ್ಣ, ಅಣಬೇರು ರಾಜಣ್ಣ ಆಗಮಿಸುವರು.

# ರಸಗೊಬ್ಬರ ಕೊರತೆ ಆಗದಂತೆ ಎಚ್ಚರ ವಹಿಸಲು ಸೂಚನೆ

ಹೊನ್ನಾಳಿ, ಮೇ 5- ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಕೊರತೆ ಆಗದಂತೆ ಎಚ್ಚರ ವಹಿಸಬೇಕೆಂದು ಕೃಷಿ ನಿರ್ದೇಶಕರಾದ ಶ್ರೀಮತಿ ನಂದಿನಿ ಸೂಚಿಸಿದರು. ತಾಲ್ಲೂಕು ಪಂಚಾಯತಿಯ ಸಾಮರ್ಥ್ಯ ಸೌಧದಲ್ಲಿ ಆಯೋಜಿಸಲಾಗಿದ್ದ ಕೃಷಿ ಪರಿಕರ ಮಾರಾಟಗಾರರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಸಭೆಯನ್ನು ಉದ್ದೇಶಿಸಿ ಮಾತನಾಡಿ ಮುಂಗಾರು ಹಂಗಾಮಿನ ಪೂರ್ವ ಸಿದ್ದತೆ ಅನ್ವಯ ರಸಗೊಬ್ಬರದ ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗುವ ರಸಗೊಬ್ಬರವನ್ನು ತಾಲ್ಲೂಕು ವ್ಯಾಪ್ತಿಯ ರೈತರಿಗೆ ಪಿ.ಓ.ಎಸ್ ಮುಖಾಂತರ ಬೆಳೆವಾರು ಪ್ರಮಾಣ ನೀಡುವಿಕೆಗೆ ಹೆಚ್ಚಿನ ಒತ್ತು ನೀಡುವುದು ಅತಿ ಅವಶ್ಯಕ ಅಂಶವಾಗಿರುತ್ತದೆ. ಇತರೆ ತಾಲ್ಲೂಕು ಮತ್ತು ಜಿಲ್ಲೆಗಳಿಗೆ ನೀಡುವುದನ್ನು ಸಂಪೂರ್ಣವಾಗಿ ಪ್ರತಿಬಂಧಿಸಬೇಕೆಂದು ಮಾರಾಟಗಾರರಿಗೆ ಸೂಚಿಸಿದರು.

ಉಪ ಕೃಷಿ ನಿರ್ದೇಶಕರಾದ ಹಂಸವೇಣಿ ಮಾತನಾಡಿ, ಕಳೆದ ಸಾಲಿನಲ್ಲಿ ರಸಗೊಬ್ಬರ ನಿಯಂತ್ರಣವನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದು, ಈ ವರ್ಷ ದಾಸ್ತಾನು ನಿರ್ವಹಣೆ ಮತ್ತು ರಸಗೊಬ್ಬರ ಕೊರತೆಯಾಗದ ರೀತಿ ಯಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕರು (ಜಾಗೃತ ದಳ) ಗೋವರ್ಧನ್ ಮಾತನಾಡಿ ಕೃಷಿ ಪರಿಕರ ಮಾರಾಟಗಾರರಿಗೆ ರಸಗೊಬ್ಬರ ನಿಯಂತ್ರಣ ಆದೇಶ, ಬೀಜ ಕಾಯ್ದೆ ಮತ್ತು ಬೀಜ (ನಿಯಂತ್ರಣ) ಆದೇಶ ಹಾಗೂ ಕೀಟನಾಶಕ ಕಾಯ್ದೆ ಬಗ್ಗೆ ವಿಸ್ತಾರವಾಗಿ ತಿಳಿಸಿದರು. ಕೃಷಿ ಪರಿಕರ ಮಾರಾಟಗಾರರ ಸಂಘದ ಪ್ರತಿನಿಧಿ ವಾಗೀಶ್ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಸಹ ಪರಿಕರ ಮಾರಾಟದಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಅಚ್ಚು ಕಟ್ಟಾಗಿ ನಿರ್ವಹಣೆ ಮಾಡುತ್ತೇವೆ ಎಂದು ತಿಳಿಸಿದರು.

ಸಭೆಯಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಸಿ.ಟಿ. ಸುರೇಶ್, ಕೃಷಿ ಅಧಿಕಾರಿ (ತಾಂತ್ರಿಕ), ಹೋಬಳಿ ಮಟ್ಟದ ಕೃಷಿ ಅಧಿಕಾರಿಗಳು ಮತ್ತು ಆತ್ಮ ಸಿಬ್ಬಂದಿ ಹಾಜರಿದ್ದರು.

# ಶಂಕರ್ ಪ್ರತಿಷ್ಠಾನದ ವಿದ್ಯಾರ್ಥಿ ವೇತನಕ್ಕೆ ಸಿದ್ದಗಂಗಾ ಕಾಲೇಜಿನ ಇಬ್ಬರು ಆಯ್ಕೆ

ದಾವಣಗೆರೆ, ಮೇ 5- ಕಲಬುರ್ಗಿಯ ಡಾ. ಪಿ.ಎಸ್. ಶಂಕರ್ ಪ್ರತಿಷ್ಠಾನ ಕೊಡಮಾಡುವ ವಿದ್ಯಾರ್ಥಿ ವೇತನಕ್ಕೆ ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ಎಸ್. ಹರ್ಷಿತ್, ಕೆ.ಎಸ್. ಅಭಿಲಾಷ ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನ ಕಳೆದ 20 ವರ್ಷಗಳಿಂದ ವೈದ್ಯಕೀಯ ಕೋರ್ಸಿಗೆ ಸೇರುವ ಬಡ ಪ್ರತಿಭಾವಂತ ಮಕ್ಕಳಿಗೆ ಆರ್ಥಿಕ ನೆರವು ನೀಡುತ್ತಾ ಬಂದಿದೆ. ಈ ವರ್ಷ ಪ್ರತಿಷ್ಠಾನದ ವತಿಯಿಂದ ರಾಜ್ಯದ 10 ಮಕ್ಕಳನ್ನು ಆಯ್ಕೆ ಮಾಡಿದ್ದು, ಈ ಪೈಕಿ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದಾರೆ.

ಪ್ರಸ್ತುತ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಪ್ರಥಮ ಎಂ.ಬಿ.ಬಿ.ಎಸ್. ಪ್ರವೇಶ ಪಡೆದಿದ್ದಾರೆ. ಪಿಯುಸಿ ಮತ್ತು ನೀಟ್ ಪರೀಕ್ಷೆ ರ್‍ಯಾಂಕಿಂಗ್ ಆಧಾರಿತ ಆಯ್ಕೆಯ ಈ ವಿದ್ಯಾರ್ಥಿ ವೇತನದಲ್ಲಿ ಪ್ರತಿ ತಿಂಗಳು 1500 ರೂ.ಗಳ ಸಹಾಯ ಧನವನ್ನು ವ್ಯಾಸಂಗ ಪೂರ್ಣ ಮಾಡುವವರೆಗೆ ಪಡೆಯುತ್ತಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಡಾ.ನರೇಂದ್ರ ಬಡಷೇಶಿ ತಿಳಿಸಿದ್ದಾರೆ.

ಹರ್ಷಿತ್ ಪಿಯುಸಿನಲ್ಲಿ 600 ಕ್ಕೆ 598, ನೀಟ್‌ನಲ್ಲಿ 720 ಕ್ಕೆ 659 ಪಡೆದಿದ್ದಾನೆ. ತಾಯಿ ಸವಿತ. ದಿ. ಆರ್. ಶ್ರೀನಿವಾಸ್ ಬಾಪೂಜಿ ಹೈಟೆಕ್ ಆಸ್ಪತ್ರೆಯಲ್ಲಿ ಗುಮಾಸ್ತರಾಗಿದ್ದಾರೆ. ಅಭಿಲಾಷ ಕೆ.ಎಸ್. ಪಿಯುಸಿಯಲ್ಲಿ 600 ಕ್ಕೆ 600, ನೀಟ್‌ನಲ್ಲಿ 720 ಕ್ಕೆ 654 ಅಂಕ ಪಡೆದಿದ್ದು, ನಾಗರಕಟ್ಟೆ ಕೃಷಿಕ ದಂಪತಿ ಶೇಖರ್, ಕೆ.ಎನ್. ನಳಿನ ಕೆ.ಬಿ. ಇವರ ಪುತ್ರಿ.





ಈ ಪ್ರತಿಭಾವಂತರ ಆರ್ಥಿಕ ಪರಿಸ್ಥಿತಿ ಗುರುತಿಸಿದ ಸಿದ್ಧಗಂಗಾ ಆಡಳಿತ ಮಂಡಳಿ ಇವರಿಗೆ ಎರಡು ವರ್ಷ ಪಿಯುಸಿ ವಿದ್ಯಾಭ್ಯಾಸ ಉಚಿತವಾಗಿ ನೀಡಿದ್ದು, ವೈದ್ಯಕೀಯ ಕೋರ್ಸ್‌ಗೆ ನೆರವಾಗುವಂತೆ ಎಂಎಸ್ಎಸ್ ಸ್ಕಾಲರ್‌ಶಿಪ್ ಯೋಜನೆಯಲ್ಲಿ ತಲಾ 50 ಸಾವಿರ ಪ್ರೋತ್ಸಾಹ ಧನ ಘೋಷಿಸಿದೆ.

ಸಿದ್ದಗಂಗಾ ಶಾಲೆಯ ಆಡಳಿತ ಮಂಡಳಿಯ ನಿರ್ದೇಶಕ ಡಾ.ಜಯಂತ್, ಕಾರ್ಯದರ್ಶಿ ಹೇಮಂತ್, ಮುಖ್ಯಸ್ಥೆ ಜಸ್ಟಿನ್ ಡಿಸೌಜ ಮತ್ತು ಪ್ರಾಚಾರ್ಯರಾದ ಜಿ.ಸಿ.ನಿರಂಜನ್ ಹಾಗೂ ಎಲ್ಲಾ ಉಪನ್ಯಾಸಕರು ಹರ್ಷಿತ್ ಮತ್ತು ಅಭಿಲಾಷ ಅವರನ್ನು ಅಭಿನಂದಿಸಿದ್ದಾರೆ.

## ನಗರಕ್ಕೆ ಇಂದು ಸಚಿವ ಭೈರತಿ

ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ (ಭೈರತಿ) ಅವರು ಇಂದು ಬೆಳಿಗ್ಗೆ 9.30 ಕ್ಕೆ ಹರಿಹರ ತಾಲ್ಲೂಕು ಹರಳಹಳ್ಳಿ ಗ್ರಾಮದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಬೆಳಿಗ್ಗೆ 11.30ಕ್ಕೆ ಜಿಲ್ಲಾ ಪಂಚಾಯತಿಯಲ್ಲಿ ಜರುಗುವ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 2.30ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

## ನಗರದ ವಾಯುವಿಹಾರ ಬಳಗದಿಂದ ಬಸವ ಜಯಂತಿ




ದಾವಣಗೆರೆ, ಮೇ 5- ವಾಯುವಿಹಾರ ಬಳಗದ ವತಿಯಿಂದ ಪಿ.ಬಿ ರಸ್ತೆಯ ರಮೇಶ್ ಕಾಫಿ ಬಾರ್ ಬಳಿ ಬಸವ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀನಿವಾಸ್ ದಾಸಕರಿಯಪ್ಪ, ಅರುಣ್ ಕುಮಾರ್, ಬಸಣ್ಣ ಹಾಗೂ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಚಂದ್ರು, ಎಚ್ .ಅರುಣ್ ಕುಮಾರ್ ಇತರರು ಉಪಸ್ಥಿತರಿದ್ದರು.

## ವಾಸವಿ ಅಮ್ಮನಿಗೆ ಕಡಲೆಕಾಯಿ ಅಲಂಕಾರ



ದಾವಣಗೆರೆ, ಮೇ 5- ನಗರದ ಎಸ್.ಕೆ.ಪಿ. ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ವಾಸವಿ ಜಯಂತಿ ಪ್ರಯುಕ್ತ ಶ್ರೀ ಅಮ್ಮನವರಿಗೆ ಇಂದು ಕಡಲೆಕಾಯಿ ಅಲಂಕಾರವನ್ನು ಮಾಡಲಾಗಿತ್ತು. ವಾಸವಿ ಭಜನಾ ಮಂಡಳಿ ಯಿಂದ ಸಾಮೂಹಿಕ ತಂಬಿಟ್ಟಿನ ಆರತಿ ಮತ್ತು ಭಜನೆ ಕಾರ್ಯಕ್ರಮದ ನಂತರ ಪ್ರಾಕಾರೋತ್ಸವ, ಮಹಾಮಂಗಳಾರತಿ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.





|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ತರಳಬಾಳು ಬಡಾವಣೆ ವಾಸಿಗಳಾದ **ಶ್ರೀಮತಿ ಉಮಾ ಕೊಟ್ರೇಗೌಡ** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 28.04.2022ನೇ ಗುರುವಾರ ಬೆಳಿಗ್ಗೆ 5.38ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕೊಟ್ರೇಗೌಡ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆ**ಯನ್ನು **ದಿನಾಂಕ 06.5.2022ನೇ ಶುಕ್ರವಾರ ಬೆಳಿಗ್ಗೆ 12.10 ರಿಂದ 12.45ಕ್ಕೆ ನಮ್ಮ ಸ್ವಗೃಹ # 2711/31, 2ನೇ ಮೇನ್, 6ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:

**ಮೃತರ ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

**ಮೊ: 98803 35422, 98807 47984**





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte